# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಕುಮುದಾಕ್ಷಿ ಕಲ್ಯಾಣ

ಕವಿ

## ಚವರ್ಕಾಡು ಶಂಭು ಜೋಯಿಸರು

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ**:
ಮಹಾಭಾರತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೪೧೨

**ಪಾತ್ರಗಳು**:
ಧರ್ಮರಾಯ, ಭೀಮಸೇನ, ಅರ್ಜುನ, ಕೃಷ್ಣ, ಅಭಿಮನ್ಯು, ಚಂದ್ರಸೇನ, ಮಂಜುಶೋಭೆ, ರವಿವರ್ಮ, ಕುಮುದಾಕ್ಷಿ, ಚಿತ್ರಬಾಹು, ಜಯಶೀಲೆ, ವಿಪ್ರರು, ಕೌರವ, ಭೀಷ್ಮಾಚಾರ್ಯ, ದ್ರೋಣಾಚಾರ್ಯ, ಅಶ್ವತ್ಥಾಮ, ಕರ್ಣ, ವಿದುರ, ಗಾರ್ಗ್ಯ ಮುನಿ, ಕೇಶವಶರ್ಮ, ದತ್ತಾತ್ರೇಯ ಮುನಿ, ಭೀಷಣಿ, ಹನುಮಂತ, ನಾರದಮುನಿ, ಕುಂಜರಾಸುರ

**ಕಥಾಸಾರಾಂಶ**:
ವನವಾಸಿಗಳಾದ ಪಾಂಡವರು ಕಾಮ್ಯಕಾವನದಲ್ಲಿರುತ್ತಾರೆ. ಮಾಹೀಷ್ಮತಿಯ ಚಂದ್ರಸೇನನ ಮಗಳು ಕುಮುದಾಕ್ಷಿಗೆ ಕೌರವನೊಡನೆ ಲಗ್ನ ನಿಶ್ಚಯಿಸಿ, ನಂತರ ಅವನ ಅವಗುಣಗಳರಿತು ವಿವಾಹ ಮಾಡುವುದಿಲ್ಲವೆಂದಾಗ ಪರಿವಾರ ಸಹಿತ ಕೌರವ ಯುದ್ಧಕ್ಕೆ ಬರುತ್ತಾನೆ. ಅವನ ಸಹಾಯಕ್ಕೆ ಕುಂಜರಖಳ, ಭೀಷಣಿಯೇ ಮೊದಲಾದ ಖಳರು ಬರುತ್ತಾರೆ. ಶ್ರೀಕೃಷ್ಣ ಹಾಗೂ ಪಾಂಡವರು ಅವರನ್ನು ಧುರದಲ್ಲಿ ಜಯಿಸುತ್ತಾರೆ. ನಂತರ ಅರ್ಜುನನೊಂದಿಗೆ ಕುಮುದಾಕ್ಷಿಯ ವಿವಾಹವಾಗುತ್ತದೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಚವರ್ಕಾಡು ಶಂಭು ಜೋಯಿಸರ ಕಾಲ ೧೮೮೫ ರಿಂದ ೧೯೩೫. ಶ್ರೀಯುತರು ಕಾಸರಗೋಡಿನ ಚವರ್ಕಾಡಿನಲ್ಲಿ ವಾಸವಾಗಿದ್ದರು. ತಂದೆ ಬೆಣ್ಣೆಗುಳಿ ನಾರಾಯಣ ಜೋಯಿಸರು. ಜ್ಯೋತಿಷ್ಯವನ್ನು ಬಲ್ಲವರಾಗಿದ್ದ ಜೋಯಿಸರು ಸಾರಡ್ಕದಲ್ಲೂ ವಾಸವಾಗಿದ್ದರಿಂದ ಇವರಿಗೆ ಸಾರಡ್ಕ ಶಂಭಟ್ಟರೆಂದೂ ಕರೆಯುತ್ತಿದ್ದರು.
ಇವರು ಬರೆದ ಪ್ರಸಂಗಗಳು: ಅಂಶುಮತಿ ಕಲ್ಯಾಣ (ಪ್ರದೋಷ ಮಹಾತ್ಮೆ), ಕುಮುದಾಕ್ಷಿ ಕಲ್ಯಾಣ, ದಶರಥೋತ್ಪತ್ತಿ ಮತ್ತು ಸುಮಿತ್ರಾ ಸ್ವಯಂವರ, ಧರ್ಮಗುಪ್ತ ವಿಜಯ ಅಥವಾ ಹಂಸವತೀ ಕಲ್ಯಾಣ, ಪ್ರಭಾವತಿ ಕಲ್ಯಾಣ, ಮೂಲಕಾಸುರ ಕಾಳಗ, ಯೋಗಿನೀ ಕಲ್ಯಾಣ, ಯೌವನಾಶ್ವ ಕಾಳಗ

**ಟಿಪ್ಪಣಿ** :

# ಪ್ರಸಂಗ ಸಾಹಿತ್ಯ

**ಮಾಲಿನೀವೃತ್ತ**
ಜಟಮಕುಟಕಲಾಪಂ ಪಂಚವಕ್ತ್ರಂ ತ್ರಿಣೇತ್ರಂ |
ನಿಟಿಲನಯನಮೀಶಂ ಕೃತ್ತಿವಾಸಂ ಮಹೇಶಂ ||
ಸ್ಫಟಿಕಸದೃಶವರ್ಣಂ ಚಂಡಖಂಡೇಂದುಮೌಲಿಂ |
ಕುಟಿಲಖಳವಿನಾಶಂ ಪಾರ್ವತೀಶಂ ಭಜಾಮಿ || 1 || 1 ||

**ನೀಲಾಂಬರಿ - ತ್ರಿವುಡೆ**
ಶರಣು ಶ್ರೀಗಣನಾಯಕ | ಸಂತತ ದೀನೋ |
ದ್ಧರಣ ಮಂಗಳದಾಯಕ ||
ಶರಣಬಂಧುವೆ ಕರುಣಸಿಂಧುವೆ |
ದುರಿತದೂರನೆ ಭವಕುಠಾರನೆ |
ಪರಮಕೀರ್ತಿಯೆ ಚಕ್ರವರ್ತಿಯೆ |
ಗಿರಿಜೆಸುತ ಸುರನರಜನಾರ್ಚಿತ || ಶರಣು || 1 ||
ಆದಿಮಧ್ಯಾಂತ್ಯಹೀನ | ಅಂಕುಶ ಪರಶು |
ಮೋದಕಭಯಾಧಾರಣ ||
ವೇದಗೋಚರ ನಿತ್ಯಮಂಗಳ |
ನಾದ ಬಿಂದುಕಲಾಕಲಿತ ಮಹ |
ದಾದಿತತ್ವಾತ್ಮಕ ಜಗತ್ರಯ |
ಮೋದಕಾರಣಮೂರ್ತಿ ಚಿನ್ಮಯ || ಶರಣು || 2 ||
ತ್ರಿದಶಪೂಜಿತಚರಣ | ಬ್ರಹ್ಮಗೆ ಬ್ರಹ್ಮ |
ಮದಮುಖಿ ಖಳನಾಶನ ||
ಮಧುಪುರಾಧಿಪ ಮದಗಜಾನನ |
ಮೊದಲು ಪೂಜೆಯಗೊಂಬ ವಿಘ್ನೋ |
ದಧಿವಡಬ ಮೂಜಗದ ಚೇತನ |
ಮುದದಿ ನಂಬಿದೆ ಸಲಹು ಸಂತತ || ಶರಣು || 3 || 4 ||

**ಸುರುಟಿ - ಏಕ**
ಕಾತ್ಯಾಯಿನಿ ಮಾಯೆ | ಜಯ ಜಯ |
ನಿತ್ಯಾತ್ಮಕಿ ತಾಯೆ ||
ದೈತ್ಯಮರ್ದಿನಿ ತ್ರಿಗುಣಾತ್ಮಾರಾಧಿತೆ |
ಸತ್ಯಚರಿತೆ ವಿಧಾತ್ರೆ | ಜಯ ಜಯ || ಕಾತ್ಯಾಯಿನಿ || 1 ||
ತ್ರಿದಶರಳಲ ಕೇಳಿ | ಬಾಧಿಪ |
ಮದಮುಖರನು ಸೀಳಿ ||
ಮುದದಲಿ ಶರಣರನೊದಗಿಲಿ ಪೊರದಿಹ |
ಸದಮಳ ಮೂರುತಿ ಪದಕೆ ನಮೋ ಜಯ || 2 ||
ದುರಿತ ದುರ್ಗುಣ ನಾಶೇ | ಸಾಸಿರ |
ತರುಣತರಣಿಭಾಸೆ ||
ಸರುವ ಚರಾಚರದುರುಚೇತನವೆರ |
ಸಿರುವ ಜಗತ್ತ್ರಯ ದೊರೆಚಕ್ರವರ್ತಿನಿ || 3 || 7 ||

**ಭಾಮಿನಿ**
ಗಣಪತಿಗೆ ತಲೆಬಾಗಿ ಗುರುಪದ |
ವನಜಕಾನತನಾಗಿ ಶಾರದೆ |
ಯನು ನುತಿಸಿ ಕೊಂಡಾಡಿ ತ್ರೈಮೂರ್ತಿಗಳ ಬಲಗೊಂಡು ||
ಅನಿಮಿಷಾದ್ಯರಿಗೆರಗಿ ಮನುಮುನಿ |
ಜನಕೆ ವಂದಿಸಿ ಭೂಮಿದಿವಿಜರ |
ಸನುಮತದಿ ಬಲ್ಲಂತೆ ಬಣ್ಣಿಪೆನೀ ಮಹಾಕೃತಿಯ || 1 || 8 ||

**ದ್ವಿಪದಿ**
ಶ್ರೀಮಹಾಭಾರತ ಪುರಾಣ ಕಥನದಲಿ |
ಭೂಮಿಪತಿ ಪಾಂಡವರು ವಿಪಿನವಾಸದಲಿ || 1 ||
ಚಂದ್ರಸೇನಾಖ್ಯ ನೃಪನಂದನೆಯ ನೆವದಿ |
ಮಂದಮತಿ ಕುರುಪತಿಯೊಳೊಂದಿ ಕಾಳಗದಿ || 2 ||

ಕುಂಜರಾಸುರನ ಹರನಿತ್ತ ಸಾಯಕದಿ |
ಭಂಜಿಸುತ ಫಲುಗುಣನು ಹರಿಯ ಸನ್ಮತದಿ || 3 ||
ಕೌರವಾದಿಗಳ ಗೆಲಿದಳವಿಮಧ್ಯದಲಿ |
ನೀರೆ ಕುಮುದಾಕ್ಷಿಯನು ನರನು ವರಿಸುತಲಿ || 4 ||
ಇಂತಾದ ಚರಿತವನು ಯಕ್ಷಗಾನದಲಿ |
ಕಂತುಪಿತ ನುಡಿಸಿದಂತೊರವೆ ಪ್ರೇಮದಲಿ || 5 || 13 ||

**ಸೌರಾಷ್ಟ್ರ - ತ್ರಿವುಡೆ**
ಇಳೆಯರಸ ಜನಮೇಜಯಗೆ ಮುನಿ |
ತಿಲಕ ವೈಶಂಪಾಯ ಬಲು ದಯ |
ದೊಳಗೆ ಭಾರತಕಥೆಯ ಪೇಳಿರೆ | ನಲವಿನಿಂದ || 1 ||
ಬಿಡದೆ ಮುನಿಯೊಳು ಕೇಳಿಕೊಂಡನು |
ಜಡಜನೇತ್ರೆಯ ನೆವದಿ ಕುರುಪತಿ |
ಯೊಡನೆ ಪಾಂಡವರೆಂತು ಕಾದಿದ | ರೊಡನೆ ಧುರದಿ || 2 ||
ಕುಂಜರಾಸುರನನ್ನು ಫಲುಗುಣ |
ಭಂಜಿಸಿದ ಪರಿಯೆಂತು ಸಮರದಿ |
ಕಂಜನಾಭನ ದಯದಿ ಕುರುಬಲ | ವಂ ಜಯಿಸುತ || 3 ||
ಸರಸಿಜಾಕ್ಷಿಯ ಪರಿಣಯವ ವಿ |
ಸ್ತರಿಸಿ ಪೇಳೆನೆ ಕೇಳಿ ಮುನಿಪತಿ |
ಹರಿಯ ಧ್ಯಾನಿಸಿ ಪೇಳತೊಡಗಿದ | ಕರುಣದಿಂದ || 4 || 17 ||

**ವಾರ್ಧಕ**
ಧರಣಿಪತಿ ಕೇಳರ್ಕನೊಲಿದಿತ್ತ ಪಾತ್ರದಿಂ |
ದಿಳೆಯಮರತತಿಗೆ ತೃಪ್ತಿಯನೀವುತಿರೆ ಭೀಮ |
ದುರುಳಕಿಮ್ಮೀರನಂ ಸೀಳ್ದು ಮಿಗೆ ಸಿಂಧುಭೂವರನ ಪರಿಭವಿಸಿ ಬಳಿಕ ||
ಹರನ ಪಾಶುಪತಾಸ್ತ್ರಮಂ ಪಡದು ಖಚರನಿಂ |
ಕುರುಪತಿಯ ಬಿಡಿಸಿ ಮಿಗೆ ಗಯನ ನೆವದಿಂದ ಶ್ರೀ |
ಹರಿಯೊಡನೆ ಕಾದಿ ಸಂಧಿಯಗೈದು ಬಳಿಕೊಂದು ದಿನ ಯಮಜನಿಂತೆಂದನು || 1 || 18 ||

**ಕಾಂಬೋಧಿ - ಝಂಪೆ**
ಕೇಳಿ ಸಹಜರು ನಮ್ಮ ಬಾಳುವೆಯನೇನೆನಲಿ |
ಭಾಳಲೋಚನ ಮುನಿದ ಮೇಲೆ ||
ಕಾಲಗತಿ ಕಷ್ಟ ಭೂಪಾಲರಾಗಿಂದು ವನ |
ದಾಲಯವದಾಯ್ತು ಶಿವ ಶಿವನೇ || 1 ||
ಜನನದಾರಭ್ಯ ನಾವ್ ಮನವಚನಕಾಯದಿಂ |
ದನುಚಿತದ ಪಾಪಕರ್ಮವನು ||
ಅನುಕರಿಸಲಿಲ್ಲ ಹಿಂದಿನ ಜನ್ಮದೊಳಗೇನೋ |
ಮನುಮಥಾಂತಕ ಬಲ್ಲನೆಲ್ಲಾ || 2 ||
ಕುರುರಾಯಗೇನ್ ದ್ರೋಹ ವಿರಚಿಸಿದೆವೈ ನಾವು |
ಹಿರಿತಂದೆ ಭೀಷ್ಮರಿರುತಿಹರು ||
ನೆರೆನೀತಿ ಪೇಳದಿರುವರೆ ನಮ್ಮ ದುರ್ಯೋಗ |
ಪರಿಭವಿಸಿತೀ ಧರ್ಮಪಥವ || 3 ||
ಶಿವಶಿವ ವಿಧಾತ್ರ ನೀನೆಮಗೇಕೆ ನಿರ್ಮಿಸಿದೆ |
ನವಖಂಡದೊಳಗೆ ನಮ್ಮಂತೆ ||
ಬವಣೆಗೊಳಗಾಗಿ ದುಃಖವ ತಾಳಲೆಂತು ಯಾ |
ದವರಾಯ ಶ್ರೀಕೃಷ್ಣ ಸಲಹು || 4 || 22 ||

**ಸಾಂಗತ್ಯ - ರೂಪಕ**
ಅರಗಿನಾಲಯದೊಳಗುರುಹಿ ಕೊಲ್ಲಲ್ಕೆಂದು |
ಉರಿಗೊಳಿಸಿದನು ನಮ್ಮಿದಿರು ||
ತರುಣಿ ಮಾನವಗೊಂಡ ಮರಸಿ ಜೂಜಾಟದಿ |
ಕೊರಳಾನು ಕೊಯ್ದು ಘಾತಕದಿ || 1 ||
ಗಹನಕಟ್ಟಿದೆನೆಂಬುತ್ಸವದಿ ನಮ್ಮನು ನೋಡಿ |
ಗಹಗಹಿಸಲ್ಕೆಲ್ಲಿ ಬಂದ ||
ಅಹಹಾ ತಾನಿನ್ನೇನು ಕುಹಕಿಯೊ ಕುರುರಾಯ |
ವಿಹಿತವನರಿಯದ ಮೂಢ || 2 ||

ನಳಿನನಾಭನ ಕಾಣದಳಿವೆ ನಿಶ್ಚಯ ಕಾಯ |
ದೊಳು ಕಂಪಿಸುತ್ತಿದೆ ಬಹಳ ||
ಫಲುಗುಣ ನೀನ್ಯೈದಿ ತಳುವದೆ ಕರಕೊಂಡು |
ನಲವಿಂದ ಬಾರಯ್ಯ ತಮ್ಮಾ || 3 ||
ಯೆಂದಾಜ್ಞಾಪಿಸಲಾಗ ವಂದಿಸಿ ಪಾರ್ಥ ತಾ |
ನಂದು ನೇಮವಗೊಂಡು ಜವದೀ ||
ಬಂದನು ಮನದಿ ಗೋವಿಂದನ ನೆನವುತ್ತಾ |
ನಂದದಿ ದ್ವಾರಕಾಪುರಕೆ || 4 || 26 ||

**ಭಾಮಿನಿ**
ವಾರಿನಿಧಿಮಧ್ಯದೊಳಗೊಪ್ಪುವ |
ದ್ವಾರಕಾಪುರವರವ ಕಾಣುತ |
ವೀರಫಲುಗುಣ ಬಂದು ಬಾಗಿಲಚರರೊಳನುಗೊಂಡು ||
ಸಾರಿ ಕೋಟೆಯ ದಾಟಿ ಬರೆ ಮುರ |
ವೈರಿಯರಿತಿದಿರೈದಿಬಂದಾ |
ಚಾರುಕೈಗಳೊಳಪ್ಪಿ ಕರತಂದೊಡನೆ ಕುಳ್ಳಿರಿಸಿ || 1 || 27 ||

**ಶಂಕರಾಭರಣ - ತ್ರಿವುಡೆ**
ಹಾಲು ಸಕ್ಕರೆ ಗುಡ ಜಲಂಗಳ |
ಶ್ರೀಲಲಾಮನು ತರಿಸುತ ||
ಮೇಲು ಶ್ರಮವನು ನಿಲಿಸಿ ಸಂತಸ | ತಾಳಿ ನುಡಿದ || 1 ||
ಪ್ರೇಮಿಗಳೆ ಕಾನನದೊಳಾದರು |
ಭೀಮ ಯಮಜನು ಯಮಳರು ||
ಕಾಮಿನೀಮಣಿ ದ್ರುಪದಜೆಗು ಸು | ಕ್ಷೇಮವೇನ್ಯೆ || 2 ||
ಸಿಂಧುಪತಿಯನು ಭಂಗಿಸಿದ ಮೇ |
ಲಿಂದುವರೆಗೂ ವಾರ್ತೆಯು ||
ಒಂದನಾದರು ತಿಳಿಯೆನೆನಲಿಂ | ತೆಂದ ನರನು || 3 || 30 ||

**ಖರಹರ ಪ್ರಿಯ - ಅಷ್ಟ**
ದೇವರ ದೇವ ಲಾಲಿಪುದು | ನಮ್ಮನು |
ಕಾವನು ನೀನೆ ಪಾಲಿಪುದು ||
ಭಾವಿಸಲೆಮಗಿಂದಿ | ನ್ಯಾವ ಭೀತಿಗಳುಂಟು |
ನೀ ವಲಿದಿರೆ ಕರು | ಣಾವಲೋಕನದಿಂದ || ದೇವರದೇವ || 1 ||
ಅಣು ಮಹತ್ತುಗಳೊಳು ನೀನೇ | ಚೇತ |
ನನು ಬೇರೆ ದೈವವ ಕಾಣೆ ||
ಗುಣನಿಧಿ ನೀನೆನ್ನು | ವನು ತಿಳಿಯದವೊಲು |
ವನಜಾಕ್ಷ ನಾನೇನ | ನೆನಲಿ ಬಿನ್ನಪವಾ || ದೇವರ ದೇವ || 2 ||
ಯಮಜಾತ ಮೊದಲಾದೆಲ್ಲವರೂ | ಕಾಲ |
ಕ್ರಮದಿ ಸುಕ್ಷೇಮದಿಂದಿಹರು ||
ಅಮರವಂದಿತ ನಿನ್ನ | ಭ್ರುಮೆಯಿಂದಲೀಕ್ಷಿಸೆ |
ನಿಮಗೆ ಕರತಾರೆಂದು | ನಮಗಣ್ಣ ಕಳುಹಿದ || ದೇವರ ದೇವ || 3 || 33 ||

**ಭಾಮಿನಿ**
ಇನಿತು ಪರಿಯೊಳು ಪಾರ್ಥ ನುಡಿಯ |
ಲ್ಕನಿತರೊಳು ಸೌಭದ್ರೆ ದುಗುಡದಿ |
ಮಣಿದು ನಿಂದಿರೆ ತಿಳಿದು ಹರಿತಂದಧಿಕ ಪ್ರೀತಿಯಲಿ ||
ಜನಕನನು ಬಿಗಿದಪ್ಪಿ ತಾ ಮ |
ಯ್ಯನು ಕರದಿ ತಡವರಿಸಿ ತೊಡೆಯೊಳು |
ವಿನಯದಿಂ ಕುಳಿತೊಡನೆ ಕೇಳಿದ ನಗುತಲಭಿಮನ್ಯು || 1 || 34 ||

**ಕಾಪಿ - ಅಷ್ಟ**
ತಂದೆ ಕೇಳೆನ್ನಬಿನ್ನಪವ | ಇತ್ತ |
ಬಂದಿರೇನ್ಕಾರಣ ವನವಾಸದಿರವ ||
ಇಂದಿಗೆಷ್ಟಾಯಿತಿನ್ನೆಷ್ಟು | ದಿನ |
ಮುಂದಿಹುದವಧಿಗೆ ತುದಿಹೊಂದಲೊಟ್ಟು || 1 ||

ಕೌರವಾದಿಗಳು ಕ್ಷೇಮಿಗಳೆ | ಮತ್ತು |
ಬೇರೇನಾದರು ಚೇಷ್ಟೆಯಿಹುದೆಯಾಮೇಲೆ ||
ನೀರೆ ದೊಡ್ಡಮ್ಮ ದ್ರೌಪದಿಯು | ಧೈರ್ಯ |
ಕಾರಿಯಾಗಿಹಳೊ ಕುಂದಿಹಳೊ ಮೈಸಿರಿಯು || 2 ||
ಜನನಿಯು ತಾನು ನೀವೆಲ್ಲ | ಇರ್ಪ |
ವನಕೆ ಬಂದಪೆವು ನಿಮ್ಮೊಡನೆ ಸುಳ್ಳಲ್ಲ ||
ಯೆನಗುದಾಸಿನವಹುದಿಲ್ಲ | ಯೇಳೆಂ |
ದೆನಲೆಂದ ಫಲುಗುಣನೆತ್ತಿ ಪ್ರೇಮದಲಿ || 3 || 37 ||

**ವಾರ್ಧಕ**
ಕಂದಯ್ಯ ಕೇಳು ಕುರುನೃಪನ ನಡತೆಗಳನುರ |
ಗೇಂದ್ರುಂಗೆ ಗರಳವಿಲ್ಲೆಂಬ ಮಾತೆಲ್ಲ ಮದ |
ದಂಧತೆಯ ನೆನಸದಸದಳ ನಾವು ದೇಶಕಾಲಕೆ ತಕ್ಕ ಸುಖದೊಳಿಹೆವು ||
ಕುಂದಿ ಮನದಾಲಸ್ಯದಿಂ ಹರಿಯ ಕರೆದುತಾ |
ರೆಂದೆನ್ನ ಕಳುಹಿದಂ ಮಗನೆ ನಿನ್ನಯ ಹಿರಿಯ |
ತಂದೆಯಹ ಧರ್ಮಜಂ ತಾಳೆನಲು ಕೇಳ್ದು ನಸುನಗೆ ಮಿನುಗೆ ಹರಿ ನುಡಿದನು || 1 || 38 ||

**ಕೇದಾರಗೌಳ - ಅಷ್ಟ**
ಗಂಡಾರಣ್ಯದಿ ದೊಡ್ಡ ಮಂಡೂಕ ತನಗಿದಿ |
ರಂಡಲೆ ಯಿಲ್ಲೆನುತ್ತ ||
ಕೊಂಡಾಡುವಂತಿರೆ ಮಿಂಡೆದ್ದು ಕೆಡುವಂತೆ |
ಕಂಡು ಕಾಣದೆ ಹೋಹರು || 1 ||
ಆರಣ್ಯವಾಸವು ತೀರಲಜ್ಞಾತವ |
ಪೂರೈಸಿದಾ ಬಳಿಕ ||
ಕಾರಿಸದಿರೆ ನೆತ್ತಿಗೇರಿದ ಪಿತ್ಥವ |
ಮಾರಾರಿ ದಯವಿರಲಿ || 2 ||
ಕೇಳು ನಾವ್ಹೋದರೆ ನಾಳೆನಾಡದಿಗೊಂದು |
ನೀಲಾಂಬರನ ವ್ರತವು ||
ತಾಳುವ ಕ್ರೋಧವ ಮೇಲೆ ಪೋಗುವ ಯೆಂದು |
ಶ್ರೀಲೋಲ ನುಡಿದನಂದು || 3 ||
ಅದಕೊಪ್ಪಿ ಫಲುಗುಣ ವಿದಿತೋಪಚಾರದಿ |
ಮುದದಿಂದ ಬಲನ ನೋಡಿ ||
ಸದಮಳೋಕ್ತಿಗಳಿಂದ ಮಧುವೈರಿಯೊಡಗೂಡಿ |
ಯಧಿಕಸ್ನೇಹದೊಳಿರ್ದರು || 4 || 42 ||

**ವಾರ್ಧಕ**
ಇರಲವನಿಪಾಲ ಕೇಳಿತ್ತ ಮಾಹಿಷ್ಮತಿಯ |
ಪುರದರಸ ಕೃತವೀರ್ಯ ಯದುವಂಶ ತತ್ಕುಲಜ |
ನುರುಪರಾಕ್ರಮಿ ಚಂದ್ರಸೇನನೊಡ್ಡೋಲಗದೊಳೊಪ್ಪಿರ್ದನೊಂದು ದಿನದಿ ||
ಮೆರವ ಸಪ್ತಾಂಗದಿಂ ನೆರದ ಸುಭಟಾವಳಿಯ |
ಬಿರಿದು ಬಿನ್ನಣಗಳಿಂ ವಾರನಾರಿಯರ ಸಿಂ |
ಗರದ ನರ್ತನದಿಂದಲೊಪ್ಪಿರಲ್ಕಾಸಭೆಗೆ ಚರರೈದಿ ಮಣಿದೆಂದರು || 1 || 43 ||

**ಮುಖಾರಿ - ಏಕ**
ಸ್ವಾಮಿ ಪರಾಕು ದೊರೆರಾಯಾ | ಸಲಾಂ ಸಲಾಂ |
ಸ್ವಾಮಿ ಪರಾಕು ದೊರೆರಾಯಾ || ಪ ||
ಪಾರಾಬಂದಿಲಿ ಭದ್ರವಾಗಿ | ಅಣು ಚರಿಸದಂತೆ |
ಹಾರೈಸದತ್ತಿತ್ತಲಾಗಿ ||
ದೋರಮುಸಲ ಮುಂಗಾರ ಕಠಾರಿಯ |
ಸಾರಿ ಹಿಡಿದು ಕಯ್ಯಾರೆ ಕಾದಿಹೆವು || ಸ್ವಾಮಿ ಪರಾಕು || 1 ||
ಪೊಸತೊಂದು ವಾರ್ತೆ ಬೇರಿಹುದು | ಹೊರ ಬಾಗಿಲೊಳಗೆ |
ವಸುಧೆಯಮರರೀರ್ವರೊಲಿದು ||
ಕುಶಲದಿ ಬಂದಿಹರಸಮಕಾರಿಣಿಕರು |
ವಸುಧೀಶ್ವರ ನಿಮ್ಮೊಸಗೆಯನೆಣಿಸುತ || ಸ್ವಾಮಿ ಪರಾಕು || 2 ||
ಯೇನೆಂದು ಪೇಳಲಿಂದಿನೊಳು | ಬಂದವರೊಡನೆ |
ನೀನಾಜ್ಞಾಪಿಸಲು ಶೀಘ್ರದೊಳು ||
ಮಾಣದೆ ತಿಳುಹಿ ನಿಧಾನಿಪೆವೆಂದೆನ |
ಲಾನರಪತಿ ಸುಮ್ಮಾನದೊಳೆಂದನು || ಸ್ವಾಮಿ ಪರಾಕು || 3 || 46 ||

**ಸಾಂಗತ್ಯ - ರೂಪಕ**

ಲೇಸನಾಡಿದಿರಿ ಸಂತೋಷವಾದುದು ಬರ |
ಲೇಸಭಾಸ್ಥಳಕೆಂದೂ ಬೆಸಸೆ ||
ಭೂಸುರರರಿತು ಮಹಾಸಭೆಗೈದೆ ಮ |
ಹೀಶನೆದ್ಬುಪಚರಿಸುತಲೆ || 1 ||
ಕರುಣಾಳುಗಳು ನೀವೆಲ್ಲಿರುವವರಿಲ್ಲಿಗೆ |
ಬರಲೇನು ಕಾರಣವಾಯ್ತು ||
ಅರುಹಿರೆನ್ನಿಂದಾಹ ಚರಣಸೇವೆಯದೇನಂ |
ದೊರೆಯಲೆಂದರು ಮಹಿಪತಿಗೆ || 2 ||
ಕ್ಷಿತಿನಾಥನೆ ಕೇಳು ನಿನ್ನತುಳ ಕೀರ್ತಿಯ ಕೇಳಿ |
ಅತಿತೋಷ ತಾಳಿ ಬಂದಿಹೆವು ||
ಮತಿವಂತನಾ ಶತಧೃತಿ ನಮ್ಮ ಜನನದಿ |
ಜತೆಗೂಡಿ ಸೃಜಿಸಿಹ ಮೊದಲೆ || 3 ||
ಆಶಾದಾರಿದ್ರಾಖ್ಯ ಪೈಶಾಚಪೀಡೆಯಿಂ |
ದೇಶಾವರದ ಭ್ರಮೆ ಹಿಡಿದು ||
ಕ್ಲೇಶಹೊಂದಿದರಿಂದಲೇ ಸಾರಿ ನೀ ಮಂತ್ರ |
ಧೀಶನೆಂದೆನುತ ಬಂದಿಹೆವು || 4 || 50 ||

**ಭಾಮಿನಿ**

ನಮ್ಮ ಪುಣ್ಯದೊಳಿರ್ದುದನು ನೀ |
ನೊಮ್ಮೆ ಚಿತ್ತಕೆ ತೋರ್ದುದನು ಕೊಡ |
ಲೆಮ್ಮ ದಾರಿಯ ಪಿಡಿವೆವೆನೆ ನರನಾಥ ಹರುಷದಲಿ ||
ಸಮ್ಮತದಿ ಧನಕನಕ ವಸನಗ |
ಳಂ ಮುದದಿ ತರಿಸಿತ್ತು ನಸುನಗೆ |
ಯಿಮ್ಮಿಗೆ ಮನೋರಥವನೆಂದನು ಧರಣಿಸುರರೊಡನೆ || 1 || 51 ||

**ಕಾಂಬೋಧಿ - ಝಂಪೆ**

ಪೊಡವಿಸುರರಿತ್ತ ಕೇಳಿ | ನಿಮ್ಮೊಡನೆ |
ನುಡಿವೆ ಸಂತಸವ ತಾಳಿ ||
ನಡೆಸಿಕೊಟ್ಟಿರೆ ಕೀರ್ತಿಯು | ಬಿಡದೆ ಸಂ |
ಗಡ ಬಹುದು ಪೋದ ಬಳಿಯು || 1 ||
ಕುಸುಮಾಕ್ಷಿ ಯೆನ್ನ ಮಗಳು | ಪ್ರಾಯ ಷೋ |
ಡಶಭರಿತೆಯಾಗಿರ್ಪಳು ||
ವಸುಧೆಯೊಳು ಯೋಗ್ಯವರನ | ಕಂಡು ಸೂ |
ಚಿಸುವುದಿಂತಿರ್ಪ ಹದನ || 2 ||
ಚರಿಸುವಿರಿ ನೀವು ಸಕಲ | ದೇಶಗಳ |
ನಿರಲಿ ಕೃಪೆ ಯೆನ್ನಮೇಲಾ ||
ಇರಿಸಬೇಕೆನಲೊಪ್ಪುತಾ | ಮರಳಿದರು |
ಹರ ಶಂಭು ಶಿವಯೆನ್ನುತ || 3 || 54 ||

**ಕಂದ ಪದ್ಯ**

ಧಾರುಣಿಯೊಳು ಸಂಚರಿಸುತ |
ಪಾರುವರೈತಂದರ್ಪಥವಿಡಿದಾಗಂ ||
ಘೋರನೆ ಹಸ್ತಿನಪುರದಾ |
ದ್ವಾರದಿ ಬೆಸಗೊಂಡೊಳಸಾರಿದರ್ಕುರುರಾಯನ ಸಭೆಗಂ || 1 || 55 ||

**ಸೌರಾಷ್ಟ್ರ - ತ್ರಿವುಡೆ**

ಬಂದ ವಿಪ್ರರ ನೋಡಿ ಕುರುನೃಪ |
ವಂದಿಸುತ ಪಾದ್ಯಾದಿ ಪೂಜೆಗ |
ಳಿಂದ ಮನ್ನಿಸಿ ಕೇಳಿದನು ನಲ | ವಿಂದಲೊಡನೆ || 1 ||
ಯಾರು ನೀವೆಲ್ಲಿಂದ ಬಂದವ |
ರೂರದಾವುದದಿಲ್ಲಿ ಬಂದಿಹ |
ಕಾರಿಯವದೇನೆನಲು ನುಡಿದರು | ಭೂರಮಣಗೆ || 2 ||
ತುಂಬಿಕೊಂಡಿಹುದೆಮಗೆ ದೊಡ್ಡ ಕು |
ಟುಂಬ ಪೋಷಣೆಗಾಗಿ ಬೇರೇ |
ನಿಂಬುಗಾಣದೆ ಚರಿಸುವೆವು ಕೇ | ಳ್ಕುಂಭಿನಿಯನು || 3 ||

ಮುನ್ನವೇ ದಾರಿದ್ರ್ಯದಿಂದಲಿ |
ನಿನ್ನವೋಲೀ ಜಗದೊಳಿರುತಿಹ |
ಮಾನ್ಯರಿಂ ದಿನ ಕಳೆದವೆಲೆ ಸಂ | ಪನ್ನ ಕೇಳು || 4 ||
ಯೆನಲು ಕುರುಪತಿ ಮೆಚ್ಚಿ ದ್ವಿಜರಿಗೆ |
ಧನ ಕನಕ ವಸನಗಳ ಕೊಡಿಸಲು |
ಮನದಿ ಹರುಷವ ತಾಳುತೆಂದರು | ಜನಪನೊಡನೆ || 5 || 60 ||

**ಶಂಕರಾಭರಣ - ಅಷ್ಟ**
ಕೇಳು ಸುಶೀಲ ಕೌರವರಾಯ ಮುದದಿ |
ಪೇಳುವೆವಿನ್ನೊಂದು ಪೊಸವಾರ್ತೆ ಶುಭದಿ ||
ಭೂಲೋಲ ಹೇಹಯ ದೇಶಪಾಲಕನು |
ಪೇಳಿಹ ನಮ್ಮೊಳೊಂದೊಳಿಗವನ್ನು || ಕೇಳು || 1 ||
ಆತನ ಸುತೆ ಕುಮುದಾಕ್ಷಿ ಯೆಂಬವಳು |
ಸಾತೀರೇಕದ ಚೆಲ್ವ ರತಿಯ ನಾಚಿಪಳು ||
ಮಾತಂಗಗಮನೆಗೆ ಷೋಡಶ ಪ್ರಾಯ |
ಪ್ರೀತನ ಸರಿಗಾಣದಲಸಿರ್ಪ ರಾಯ || 2 ||
ಧರಣಿಪಾಲರೊಳಿನ್ನ ಸುತೆಗೆಣೆಯಾದ |
ವರನನೀಕ್ಷಿಸಿ ಪೇಳಿರೆಂದೆವಗೊರದ ||
ದೊರೆ ನಿನಗಾಹಳು ವರಿಸೆಂದು ದ್ವಿಜರು |
ಹರಿ ಕೃಷ್ಣ ಶರಣೆಂದು ಸ್ಮರಿಸುತ್ತೈದಿದರು || 3 || 63 ||

**ಕಾಂಬೋಧಿ - ಝಂಪೆ**
ಭೂಸುರರು ಮರಳಲ್ಕೆಯಾ ಸಭಾಸದರೊಡನೆ |
ತೋಷದಿಂ ಕುರುನೃಪತಿ ನುಡಿದ ||
ಲೇಸಾಗಿ ತನಗಾ ಸುವಾಸಿನಿಯ ವರಿಸುವಡೆ |
ಈ ಸಕಲರಾಲೋಚಿಸುವದು || 1 ||
ಯೆಂದೆನಲು ಕೇಳಿ ಬಳಿಕೆಂದನಾ ಕಲಿಕರ್ಣ |
ನಿಂದು ಪೌರೋಹಿತರ ಕರಸಿ ||
ಚಂದದಿಂ ಹೈಹಯ ವಸುಂಧರೆಗೆ ಕಳುಹಿ ಮಿಗೆ |
ಮುಂದಾಹ ಕೆಲಸ ಸಾಧಿಪುದು || 2 ||
ಯೆನಲು ಸಕಲರು ಮೆಚ್ಚಿ ಮುನಿಪ ಗಾರ್ಗ್ಯರ ಕರೆಸಿ |
ವಿನಯದುಡುಗರೆಯುಚಿತಗಳನು ||
ಸನುಮತದೊಳಿತ್ತು ಕುರುಜನಪನಿಂತೆಂದ ನೀ |
ಘನ ಬೇಗ ಪೋಗಿ ಮಾತಾಡಿ || 3||
ಮದುವೆಗೆ ಮುಹೂರ್ತ ಶ್ರುತಿಮತದಿಂದ ನಿಶ್ಚೈಸಿ |
ಮುದದಿಂದ ಬಂದು ದಿಬ್ಬಣವ ||
ಸದರದಿಂದೈದಿ ಶುಭದುದಿತವನು ಕಾಣಿಸುವ |
ದಿದು ನಿಮಗೆ ಕೊಡಿರುವುದೆಂದ || 4 ||
ಯೆನಲದಕೆ ಮನಮೆಚ್ಚಿ ಸನುಮತದಿ ಯತಿವರ್ಯ |
ವಿನಯದಿಂ ಬೀಳ್ಕೊಂಡು ಜವದಿ ||
ಮುನಿಪತಿಯು ಚಂದ್ರಸೇನನ ಪುರಕೆ ಸಾರ್ದು ಚರ |
ರನುಮತದಿ ಬಾಗಿಲನು ದಾಟಿ || 5 || 68 ||

**ಭಾಮಿನಿ**
ಬರಲು ಸಭೆಸಹಿತಿದಿರು ಬಂದಾ |
ಧರಣಿಪತಿಯಹ ಚಂದ್ರಸೇನನು |
ಕರವಿಡಿದು ಕರತಂದು ಹರಿವಿಷ್ಟರದಿ ಕುಳ್ಳಿರಿಸಿ ||
ಚರಣ ಪೂಜೆಯಗೈದು ಭಕ್ತಿಯೊ |
ಳೆರಗಿ ನಿಂದಿರೆ ಕ್ಷೇಮವಾರ್ತೆಯ |
ನರಿತು ನುಡಿದನು ಮುನಿವರೇಣ್ಯನು ಮಧುರ ವಚನದಲಿ || 1 || 69 ||

**ಕಾಂಬೋಧಿ - ಅಷ್ಟ**
ಜನಪಾಲ ಕೇಳಿನ್ನ ಮಾತ | ನಿನ್ನ |
ಘನಕೀರ್ತಿ ಲೋಕದೊಳೆಲ್ಲ ವಿಖ್ಯಾತ ||
ಮನಕೆ ಸಂತೋಷವದಾಯ್ತು | ಇಲ್ಲಿ |
ಗೆನಗೆ ಹಸ್ತಿನಪುರದಿಂದ ಬರವಾಯ್ತು || 1 ||

ದೇಶಾವರದಲಿ ಬಂದಿರುವ | ಧಾರು |
ಣೀಸುರರಿಂದರಿತಿರುವ ||
ಲೇಸು ನಿನ್ನಯ ಮನದಿರವ | ವಸು |
ಧೀಶ ಕೌರವ ತಿಳಿದೆನ್ನನಟ್ಟಿರುವ || 2 ||
ನಿನ್ನಣುಗೆಯ ಕುರುನೃಪಗೆ | ಕೊಟ್ಟು |
ಮನ್ನಿಸು ಮದುವೆಯ ಮಾಡಿ ನೀ ಕಡೆಗೆ ||
ಅನ್ಯೋನ್ಯಭಾವದೊಳಿರಲು | ಕೇಳು |
ನಿನ್ನಯ ಸುತೆಯ ಪುಣ್ಯೋದಯವೆನಲು || 3 || 72 ||

**ಭಾಮಿನಿ**
ಲೇಸನಾಡಿದಿರೆನ್ನ ಸುತೆಯ ಮ |
ಹೀಶ ಕುರುಪತಿಗೀವೆನೆಂದೆನೆ |
ತೋಷದಿಂ ನಾಲ್ಕನೆಯ ದಿನ ಸುಮುಹೂರ್ತ ನಿಶ್ಚೈಸಿ ||
ಭೂಸುರೋತ್ತಮನುಚಿತದಿಂ ಮರ |
ಳೀ ಸುವಾರ್ತೆಯ ತಿಳುಹೆ ಕುರುಪತಿ |
ಯಾ ಸಮಸ್ತರ ಮತದಿ ಸನ್ನಹ ಗೈವುತಿರಲಿತ್ತ || 1 || 73 ||

**ಸೌರಾಷ್ಟ್ರ - ತ್ರಿವುಡೆ**
ಕೇಳು ನೃಪವರ ದೈವಘಟನೆಯ |
ಪೇಳಲಾರಿಗೆ ಸಾಧ್ಯವೈ ಭೂ |
ಪಾಲ ವಿಧುಸೇನಕನ ಸಚಿವನ | ಬಾಲೆಯೋರ್ವೆ || 1 ||
ಸುಪ್ರವೀಣೆಯು ವಿಜಯಶೀಲೆಯೆ |
ನಿಪ್ಪವಳು ತಾ ತಿಳಿಯದಿನ್ನತಿ |
ಕ್ಷಿಪ್ರದಿಂದೈದಿದಳು ನಿಜ ಸಖಿ | ಇಪ್ಪ ಬಳಿಗೆ || 2 ||
ರನ್ನಮಣಿ ಮಾಳಿಗೆಯೊಳುಯ್ಯಲೆ |
ಯನ್ನು ತೂಗುವ ಕುಮುದಲೋಚನೆ |
ಮನ್ನಿಸುತ ಕೇಳಿದಳು ಘನಸಂ | ಪನ್ನೆ ನೋಡಿ || 3 ||
ಯೇನು ಬಂದೆ ಲತಾಂಗಿ ನಿನ್ನನು |
ಕಾಣದತ್ಯಾಲಸ್ಯ ಮನದೊಳು |
ಪೇಳು ಪೊಸ ವಾರತೆಯನೆಮ್ಮೊಳು | ಶೀಲವಂತೆ || 4 ||
ಯೆನಲು ನಸುನಗೆ ದಂತಕಾಂತಿಯು |
ಮಿನುಗಲೆಂದಳು ನಿನ್ನ ನೋಡಲು |
ಗುಣದಿ ಬಂದೆನು ಕೇಳು ಪೊಸತೊಂ | ದನು ಮೃಗಾಕ್ಷಿ || 5 || 78 ||

**ಬೇಗಡೆ - ಆದಿ**
ಕೇಳು ಸದ್ಗುಣಶೀಲೆ ನೀ ಮುದದಿ | ಪೊಸತೊಂದು ವಾರ್ತೆಯ |
ಕೇಳಿದೆನು ಯೆನ್ನಾಳಿಯರ ಮುಖದಿ ||
ಭೂ ಲಲಾಮನು ನಿನ್ನ ಪಿತ ಶಂ |
ಡಾಲ ಕುರುಪತಿ ಕೌರವೇಂದ್ರಗೆ |
ಲೀಲೆಮಿಗೆ ಪರಿಣಯವನೆಸಗಲು |
ಪೇಳಿ ನಿನ್ನನು ಕೊಡುವನಿದು ದಿಟ || ಕೇಳು || 1 || 79 ||

**ಕಾಂಬೋಧಿ - ಅಷ್ಟ**
ಆಯತನಯನೆ ನೀ ಕೇಳು | ಮಿಕ್ಕ |
ಮಾಯಕ ಮಾತೇನಿದರೊಳು ||
ತಾಯಿ ತಂದೆಗಳೊಪ್ಪಿ ಪ್ರೀಯದೊಳಿತ್ತರೆ |
ನ್ಯಾಯವಿದ್ವಂತಾಯ್ತು ನೋಯಲೇನದರಿಂದ || ಆಯತ || 1 || 80 ||

**ಬೇಗಡೆ - ಆದಿ**
ನೀತಿಗೊಪ್ಪಲು ರೀತಿ ಬೇರಿಹುದು | ನಾ ಕೇಳಿ ಬಲ್ಲೆನು |
ಆತ ಕುರುಭೂನಾಥಗಿಹ ಬಿರಿದು ||
ಭೂತಳವು ತುಂಬಿಹುದು ದುಷ್ಟ ದು |
ರಾತುಮನು ಪಾಂಡವರ ಕಪಟ |
ದ್ಯೂತದಲಿ ವನವಾಸಕಟ್ಟಿದ |
ಪೇತುಗನು ಕಡು ಲಜ್ಜಭಂಡನು || 1|| 81 ||

**ಕಾಂಬೋಧಿ - ಅಷ್ಟ**
ಸರಿಯೆ ನೀನೊಂದು ಮಾತರಿಯೇ | ಅಷ್ಟ |
ಸಿರಿಯೆ ಸೌಭಾಗ್ಯದ ಗಿರಿಯೆ ||
ವರದ ಮಾತನು ಮೀರಿದರೆ ಪಿತಗಪಕೀರ್ತಿ |
ಬರುವದು ಮುಂದೇನು ಹರಚಿತ್ತವನು ಕಾಣೆ || 1 || 82 ||

**ಬೇಗಡೆ - ಆದಿ**
ಚಿತ್ತವಿಸು ನುಡಿ ಧಾತ್ರಿಪತಿಸುತೆಯೆ | ಚಿಂತಿಸದೆ ಧೈರ್ಯದಿ |
ಪೆತ್ತವರಿಗಿದನರ್ಥಿಯಿಂ ನುಡಿಯೆ ||
ಉತ್ತರವ ಕೇಳುತ್ತಲಿದಕೆ |
ಮತ್ತೆ ನಮ್ಮಾಲೋಚನೆಯ ಮಾ |
ಡುತ್ತ ಗೆಲುವದಿದೇನು ಘನವೆ |
ನ್ನುತ್ತ ನುಡಿಯಲು ಕೇಳಿ ಧೈರ್ಯದಿ || 1 || 83 ||

**ಕಂದ ಪದ್ಯ**
ಗೆಳತಿಯ ಮಾತಂ ಕೇಳುತ |
ಲಲನಾಮಣಿ ಮಾತೆಯ ಬಳಿಗೈತಂದತಿ ವಿನಯದೊಳಂ ||
ಬಳುಕುತ ನೆಲನಂ ನೋಡುತ |
ಗಳದೊಳಗಿಂದುಸುರಿದಳ್ಭಯದಿಂದಂ || 1 || 84 ||

**ಶಂಕರಾಭರಣ – ತ್ರಿವುಡೆ**
ಮಾತೆ ಯೆನ್ನಯ ಮಾತ ಲಾಲಿಸು ಪ್ರೀತಿಯಿಂದ | ತನ್ನನೂ |
ತಾತ ಕುರುಭೂನಾಥಗೀಯಲು ಮಾತನಿತ್ತ || 1 || 85 ||

**ಸಾಂಗತ್ಯ - ರೂಪಕ**
ಮುಗುದೆ ನಿನಗೆ ಪ್ರಾಯ ಮಿಗುವರಿಯಿತು ನೋಡೆ |
ನಗೆಗೇಡಾಗದೆ ನೋಡುವರಿಗೆ ||
ಖಗವಂಶೋದ್ಭವ ಸಾಮ್ರಾಜ್ಯಗಳಿಗೆ ಕುಂದಿಲ್ಲ |
ಮಗಳೇ ನೀನೇನೆಂಬುದೀಗ || 1 || 86 ||

**ಶಂಕರಾಭರಣ - ತ್ರಿವುಡೆ**
ಆತ ಗಡ ವಿಶ್ವಾಸಘಾತಕಿ |
ಭೂತದಯೆಯೂ ಇಲ್ಲದ ||
ಪಾತಕಿ ಮದಾಂಧನು ವಿಚಾರಿಸೆ ನೀತಿಹೀನ || 1 || 87 ||

**ಸಾಂಗತ್ಯ - ರೂಪಕ**
ಎನಲೆಂದಳಬಲೆ ಇಂದಿನೊಳು ನಿನ್ನೊಳು ಬಂದು |
ಯಿನಿತೆಲ್ಲ ಪೇಳ್ವವರ್ಯಾರು ||
ಜನಪರು ಭಾಷೆಯಿತ್ತನುಚಿತವೆಂಬರೆ |
ತನಗರಿಯದಿದೊಂದು ಕೇಳಿ || 1 || 88 ||

**ಶಂಕರಾಭರಣ - ತ್ರಿವುಡೆ**
ಆದರೊಳ್ಳಿತು ಜನನಿ ಕೇಳೌ |
ನೀ ದಯದಲೀ ನೇಮವ ||
ಸಾದರದಿ ಕೊಡು ಮರಣಕೆನಗೆ ವಿಷಾದವ್ಯಾಕೆ || 1 || 89 ||

**ಸಾಂಗತ್ಯ - ರೂಪಕ**
ಸುತೆಯ ಮಾತನು ಕೇಳ್ದು ಸತಿ ಮಂಜುಶೋಭೆಯು |
ಪಿತನೊಳು ಪೇಳ್ವ ಬಾರೆಂದು ||
ಜತೆಯಾಗಿ ನಡೆತಂದು ಪತಿಗೊಂದಿಸುತಲೆಂದ |
ಳತಿಶಯೋಕ್ತಿಯಲಿ ಕೈ ಮುಗಿದು || 1 || 90 ||

**ವಾರ್ಧಕ**
ಸುತೆಗೆ ಪರಿಣಯ ಮಾಳ್ಪರಂತೆ ಕುರುಪತಿಗಂತೆ |
ಅತಿಮೂರ್ಖನಂತೆ ಪಾತಕಿಯಂತೆ ಖಳನಂತೆ |
ಹಿತವರಿಯನಂತೆ ಪಾಂಡವರಂತೆಯವರ ವನವಾಸಕಟ್ಟಿರ್ಪನಂತೆ ||
ಅತಿ ಕೋಪಿಯಂತೆ ಸ್ವಾಮಿದ್ರೋಹಿಯಂತೆ ಮಿಗೆ |
ಹಿತವಿಲ್ಲವಂತಿವಳ್ಗೆ ಜತೆಯಾಗದಂತೆ ಇಂ |
ಗಿತವೀವುದೆಂತಾದರಾತ್ಮಘಾತಕಕೀವುದಂತೆ ನೇಮವನಿವಳ್ಗೆ || 1 || 91 ||

**ಕಾಂಬೋಧಿ - ಅಷ್ಟ**
ಕಾಂತೆಯಾಡಿದ ಮಾತ ಕೇಳಿ | ಭೂಮಿ |
ಕಾಂತನು ಕ್ಲೇಶವ ತಾಳಿ ||
ತಾಂ ತವಕದಿ ತನ್ನ ಸುತೆಯ | ಯೆತ್ತಿ |
ಚಿಂತಸಬೇಡವೆಂದನು ಬಲು ಧೈರ್ಯ || 1 ||
ತರಳೆ ಕೇಳೌ ಮನಸಿನೊಳು | ಹಿತ |
ವಿರದಿರೆ ಛಲಮುಂಟೆ ಮುಗುದೆ ನೀ ತಾಳು ||
ವರದ ಮಾತಿಗೆ ಕುರುಪತಿಗೆ | ಚಾರ |
ಕರ ಕಳುಹಿಸುವೆ ಸಂಶಯವೇನೀ ಘಳಿಗೆ || 2 ||
ಅರಿಯೆ ನಾನಿಂಥ ಸಂಗತಿಯ | ಕೌರ |
ವರ ನೀತಿ ನಡತೆಯದೆಂತೆಂಬ ಬಗೆಯ ||
ಕರಕರೆಗೊಳದಿರು ಮನದಿ | ಸುಮ್ಮ |
ನಿರು ಪೋಗೆಂದೆನುತ ಚರರಿಗೆಂದ ನಯದಿ || 3 || 94 ||

**ಭಾಮಿನಿ**
ಕೇಳಿ ಚಾರಕರಿಂದಿನೊಳು ಶುಂ |
ಡಾಲಪುರಪತಿ ಕೌರವೇಂದ್ರಗೆ |
ವಾಲೆಯನು ನೀವಿತ್ತು ಜತನದಿ ಬನ್ನಿರೆಂದೆನುತ ||
ಭೂಲಲಾಮನು ಕಳುಹೆ ಬಂದು ವಿ |
ಶಾಲ ನಗರದ ಕೋಟೆ ಬಾಗಿಲ |
ಪಾಲಕರೊಳನುಗೊಂಡು ಸಭೆಯಿದಿರ್ಗೈದಿದರು ನೃಪಗೆ || 1 || 95 ||

**ಕಂದ ಪದ್ಯ**
ವಂದಿಸಿ ಬಿನ್ನವಿಸಿದರಾ |
ವೃಂದೆವು ಹೃಹಯದಿಂ ನಮ್ಮೊಡೆಯಂ ||
ಚಂದಿರಸೇನಂ ನಿಮಗೊಂದು ಲಿಖಿತ ಕೊಡ |
ಲೆಂದಟ್ಟಿದನೆಂದಿತ್ತುರ್ಮುದದಿಂ || 1 || 96 ||

**ಕೇದಾರಗೌಳ - ಅಷ್ಟ**
ಚರರಿತ್ತ ಲಿಖಿತವ ನೆರೆದ ಮಹಾಸಭೆ |
ಸರುವರು ಕೇಳ್ವಂದದಿ ||
ಕರಣಿಕನನು ಕರದೊರೆಯೆ ವಾಚಿಸಿದನಂ |
ದಿರದತಿ ಸಾಂಗದಲಿ || 1 ||
ಧಾತ್ರೀಶ ಶಶಿವಂಶ ಮಸ್ತಕಮಣಿಯೆ ನಾ |
ಪ್ರಾರ್ಥಿಸುವೆನು ನಿಮಗೆ ||
ವರ್ತಿಸಿದಂತೆನ್ನ ಪುತ್ರಿಯ ವಿಷಯದಿ |
ಮತ್ತೊಂದು ಬದಲಾದುದು || 2 ||
ತರಳೆಗೆ ಮನಸೊಲ್ಲದರುಹಲು ತನಗಾಕೆ |
ಬರಸಿದೆನೀ ಲಿಖಿತ ||
ದೊರೆಯೆ ಕೋಪಿಸದಿರೆಂಬರಿಕೆ ಚಂದಿರಸೇನ |
ನೆರಗಿ ಬೇಡುವ ಬಿನ್ನಹ || 3 || 99 ||

**ಕಾಂಬೋಧಿ - ಝಂಪೆ**
ಬರದೊಕ್ಕಣೆಯ ಸಾರವರಿತಾ ಸುಯೋಧನನು |
ಬೆರಗುವಡುತರ್ಕಜನೊಳೆಂದ ||
ದೊರೆ ಚಂದ್ರಸೇನನಹುದಿರಲಿ ಕುರಿಗಳು ನಾವು |
ಸ್ಮರಿಸಲಸದಳವೇನಿದಯ್ಯಾ || 1 ||

ಈತನಣುಗೆಯ ನಮಗೆ ಮಾತನಾಡಿಸಲಿಲ್ಲ |
ವಾತನೇ ಜಗವರಿಯೆ ತಿಳುಹಿ ||
ನೂತನದೊಳೊಪ್ಪಿ ಮಗುಳೋತು ಲಗ್ನವನಿರಿಸಿ |
ಈ ತರದ ನಡತೆ ಯೇನಯ್ಯಾ || 2 ||
ಶ್ವಾನದೊಳು ಬೆಸಗೊಂಡು ಕಾನನದಿ ಮೃಗಬೇಟೆ |
ಗಾನುವರೆ ದುಷ್ಟ ವನಿತೆಯರ ||
ವಾಣೆಗೊಳಗಹರೆ ಬಿಡು ಮಾನುಷ್ಯರೂಪಿಡಿದ |
ಕೋಣನೆಂದೆನಲೆಂದ ಕರ್ಣ || 3 || 102 ||

**ಭೈರವಿ - ಅಷ್ಟ**
ದೊರೆಯೇ ನೀ ಲಾಲಿಸಿಂದು | ನಮ್ಮನು ತಿರ |
ಸ್ಕರಿಸಿದನಾತನೆಂದು ||
ಕರಕರಿಸದಿರಿಂದು | ತರಳೆಯ  ನಿನಗೆ ನಾ |
ವಿರಚಿಪೆ ಮದುವೆಯನ್ನು || ಸಂಶಯವೇನು || 1 ||
ನಾಡದು ಸುಮುಹೂರ್ತವೇ | ದಿಬ್ಬಣವೈದಿ |
ನೋಡುವದವನ ನೋವೇ ||
ಮೂಢನ ರಣದಿ ವಿ | ಭಾಡಿಸಿ ತರಳೆಯ |
ಕೂಡೆ ಕೈಸೆರೆವಿಡಿವ || ಬರಲಿ ಕಾವ || 2 ||
ತಡೆವರ್ಯಾರ್ನಮ್ಮನಿಂದು | ಶ್ರೀ ಕೈಲಾಸ |
ದೊಡೆಯನೆ ನಿಲಲಿ ಬಂದು ||
ಬಿಡುವೆನೆ ನೋಡೆನ್ನ | ಕಡುಹನೆಂದೆನುತಲೆ |
ಪೊಡವೀಶಗೆಂದ ಕರ್ಣ || ಶೌರ್ಯದಿ ಪೂರ್ಣ || 3 || 105 ||

**ಕಾಪಿ - ಅಷ್ಟ**
ಎಂದು ಧೈರ್ಯವ ಕರ್ಣ ನೃಪಗೆ | ಪೇಳ |
ಲಂದು ದ್ರೋಣನು ಕೇಳಿ ನುಡಿದ ಕೌರವಗೆ ||
ಹಿಂದು ಮುಂದೆಣಿಸದೆ ನಾವು | ಕರ್ಣ |
ನೆಂದುದ ಕೇಳ್ದರೆ ಬರುವದು ನೋವು || 1 ||
ಆ ತರುಣಿಯಳೊಲ್ಲದಿರಲು | ನಮ |
ಗೇತರ ಶೌರ್ಯವಾತನೊಳುಂಟೆ ಬದಲು ||
ಭೂತಳದೊಳಗಿಲ್ಲದಾಯ್ತು | ನೋಡ |
ಲೀತನೆಂದಾತಗೆ ಕೀರ್ತಿಯದಾಯ್ತು || 2 ||
ಆಗದಾಗದು ಇಂಥಾ ಮನಸು | ದು |
ರ್ಯೋಗ ಸಂಭವಿಪುದೆಂದಿಗು ಸಲ್ಲದೀಸು ||
ಆಗಮ ಸಿದ್ಧಾಂತವಿಹುದು | ನಮ್ಮಿಂ |
ದಾಗಿ ವಂಶಕ್ಕಿಂದು ಕೊರತೆ ಬಂದಪುದು || 3 || 108 ||

**ಕಂದ ಪದ್ಯ**
ಇಂತಾನೃಪತಿಗೆ ನೀತಿಯ |
ನುಂ ತಾಂ ತವಕದಿ ಕಲಶಜ ನುಡಿಯಲು ಕೇಳುತ್ತಂ ||
ಅಂತಕನೊಲ್ಮೀಸೆಯ ತಿರುಹುತ |
ಲಿಂತೆಂದನು ರೋಷದಿ ಕರ್ಣಂ || 1 || 109 ||

**ಭೈರವಿ - ಅಷ್ಟ**
ಸಾಕೆಲ್ಲವದ ನಾವು ಬಲ್ಲೆವು | ನಿಮಗೆ ಸುಮ್ಮ |
ಗೇತಕೆ ರಾಜತ್ವದ ಕೆಲಸವು ||
ಲೋಕದಿ ದ್ವಿಜರು ವಿ | ವೇಕವನರಿಯರಿಂ |
ತಾ ಕುಲ ಪದ್ಧತಿಯು || 1 ||
ಶ್ರೇಷ್ಠ ಪುನೀತರೆಂದೆನುತಲಿ | ನಿಮ್ಮನು ನಂಬಿ |
ದಷ್ಟು ಸಂಭ್ರಮ ಗರ್ವದಿಂದಲಿ ||
ನಿಷ್ಠೂರ ಗಳಹುತ್ತ | ಸೃಷ್ಟೀಶನನುವಿಗಿ |
ಕ್ಕಟ್ಟನು ತಹುದೈಸಲೆ || 2 ||
ಒಡೆ ತುಪ್ಪ ಶಾಲ್ಯಾನ್ನವ | ತಿಂದಂತಲ್ಲ |
ಪೊಡವಿಯಾಳುವ ಮಾರ್ಗವ ||
ನುಡಿಯಲು ಸಲ್ಲದೆಂ | ದೊಡನೆ ಘರ್ಜಿಸೆ ಕೇಳಿ |
ಕಡೆಯ ಭೈರವನಂದದಿ || 3 || 112 ||

**ಮಾರವಿ - ಏಕ**
ನುಡಿಯನು ಕೇಳುತ ಕೊಡನಾತ್ಮಜ ಸುತ |
ಘಡ ರಾಧೆಯ ಮಗನೇ ||
ನುಡಿ ನೀನೆತ್ತಣ ಪೊಡವಿಪ ವಿಪ್ರರ |
ಗಡಣವ ನಿಂದಿಪರೇ || 1 ||
ಕುಕ್ಕುರನಿಗೆ ಪಲ್ಲಕ್ಕಿಯನಿತ್ತವೊ |
ಲೀ ಕ್ಷಮೆಪತಿ ತಂದು ||
ಸೊಕ್ಕಿಸಿ ಬಿಟ್ಟನಿದಕ್ಕಿಂದಿಲಿ ನಾ |
ತಕ್ಕುದನೆಸಗುವೆನು || 2 ||
ನೀತಿ ವಿಚಾರವ ತಾತನು ಧರಣೀ |
ನಾಥನಿಗುಸುರಿದರೆ ||
ಯೇತಕೆ ಗಳಹುವೆ ಮಾತಿಗೆ ಸಲುಗೆಯೆ |
ಪಾತಕಿ ಘಡಯೆಂದ || 3 || 115 ||

**ಭೈರವಿ - ಏಕ**
ಎನಲೆಂದನು ರಾಧೇಯ | ಈ |
ಬಣಗು ವಿಪ್ರರ ದಿಗುಬಲೆಯ ||
ರಣದಲಿ ಬಡಿದಿತ್ತಪೆನು | ನೀ |
ನೆಣಿಕೆಯೆ ಯೆನಲುಸುರಿದನು || 1 ||
ಘಡ ಬಲೆಗಾರರ ತರಳ | ನಿನ್ನ |
ಹೆಡೆತಲೆಯಲಿ ಕೆಂಗರುಳ ||
ಬಡಿದು ನೀಗಿಸುವೆ ನಿಲ್ಲೆನಲು | ಖಿಡಿ |
ಯಿಡುತರ್ಕಜ ರೋಷದೊಳು || 2 ||
ವಿಪ್ರಾಧಮ ನಿಲ್ಲೆಂದು | ತೆಗ |
ದೊಪ್ಪುವ ಕಣೆಗಳನಂದು ||
ದರ್ಪದಿ ಮುಸುಕಲು ಕಡಿದು | ಮಗು |
ಳೊಪ್ಪಿ ಸುರಿಯೆ ಮೇಲ್ವರಿದು || 3 || 118 ||

**ಕೇದಾರಗೌಳ - ಝಂಪೆ**
ಕಾಣುತ್ತ ಕುರುಭೂಪನು | ಧಿಮ್ಮನೆ |
ದ್ರೋಣಿದೇನೆನುತವರನು ||
ಮಾಣುಮಾಣೆಂದು ತಡದು | ನಿಮ್ಮೊಳಗಿ |
ದೇನಾಶ್ಚರ್ಯ ತೋರ್ಪುದು || 1 ||
ಪರಿಣಯದ ನೆವನದಲ್ಲಿ | ಮನವೆಂಬ |
ಹರಿಣಾಂಕಗಿಂದಿನಲ್ಲಿ ||
ಚರರಿತ್ತ ಲಿಖಿತವೆನುವ | ರಾಹುವಿನ |
ಪರಿಪೂರ್ಣ ಗ್ರಸ್ತದಿರವ || 2 ||
ಅರಿಯದವರಲ್ಲ ನೀವು | ಯೆನ್ನ ಹಣೆ |
ಬರಹಕಿದು ತಕ್ಕ ಠಾವು ||
ಕರುಣಿಪುದು ಸಾಕೆನ್ನುತ | ಈರ್ವರನು |
ಕರತಂದು ಕುಳ್ಳಿರಿಸುತ || 3 || 121 ||

**ಭಾಮಿನಿ**
ಬಳಿಕ ಕುರುಪತಿ ದುಗುಡದಿಂದಿರೆ |
ವಳವರಿತು ಗಾಂಗೇಯನನುಮತ |
ದೊಳಗೆ ಮಿಗೆ ಮನ್ನಿಸುತ ಭೂಪತಿಗೆಂದನಾ ದ್ರೋಣ ||
ಮಲಗಿ ನಿದ್ರೆಯೊಳಿಹನನಿಂದೀ |
ನೆಲೆಗೆ ಭೋಜನವಿಲ್ಲವೆಂದಂ |
ತಿಳೆಯ ಪಾಲಕ ಚಂದ್ರಸೇನನು ನೆಗಳಿದನೆ ಲೇಸು || 1 || 122 ||

**ಶಂಕರಾಭರಣ - ಅಷ್ಟ**
ಲಾಲಿಸು ಕುರುಕುಲಾಧೀಶ ಸಂತಸದಿ |
ತಾಳದಿರ್ದುಗುಡವನಿಂದು ನಾವ್ ಭರದಿ ||
ನಾಳೆಗೆ ದಿಬ್ಬಣದೊಳು ಬಲಗೂಡಿ |
ದಾಳಿಯಿಟ್ಟವನ ನೋಡುವ ಮಾಳ್ಪ ಮೋಡಿ || 1 ||

ಬಂದುದನೆಲ್ಲವನನುಭವಿಸುವದು |
ಕುಂದದೆ ಮನದೊಳು ಧೈರ್ಯ ತಾಳುವದು ||
ವಂದರಿಂದಾರು ಸಾಧನೆಯ ಸಾಧಿಪುದು |
ಮುಂದಣ ಗಣನೆ ದೈವಾಧೀನವಹುದು || 2 ||
ನೆರೆಯಲಿ ನಾಳೆಗೆ ಚತುರಂಗ ಬಲವು |
ಯೆರಡಿಲ್ಲವೆನೆ ಕೇಳಿ ಸರುವರ ಮತವು ||
ಅರಿತೆಲ್ಲರೊಪ್ಪಿ ಸನ್ನಹ ಗೈವುತಂದು |
ಮರುದಿನ ಪೊರಟುದದ್ಭುತ ಸೈನ್ಯಸಿಂಧು || 3 || 125 ||

**ವಾರ್ಧಕ**
ಕುರುನೃಪತಿ ಗಾಂಗೇಯ ವಿದುರ ಕೃಪ ಕೃತವರ್ಮ |
ಗರುಡಿಯಾಚಾರ್ಯನಶ್ವತ್ಥಾಮನಾ ದಿವಾ |
ಕರತನಯ ಸೈಂಧವ ವಿಕರ್ಣ ದುಶ್ಶಾಸನಾದ್ಯಖಿಳ ಚತುರಂಗದಿಂದ ||
ಧರಣಿ ನಡನಡುಗಲೆತ್ತಿದ ಛತ್ರ ಚಾಮರದ |
ಬಿರಿದಿನಿಂ ಹೈಹಯಾಖ್ಯದ ನಗರಕೈತಂದು |
ಚರರೀರ್ವರಂ ಕಳುಹೆ ಹರಿತಂದು ಚಂದ್ರಸೇನಂಗೆರಗಿ ನುಡಿದರಂದು || 1 || 126 ||

**ಮುಖಾರಿ - ಏಕ**
ಸ್ವಾಮಿ ನಮಾಮಿ ಸುಪ್ರೇಮಿ | ಯೆಂಥೆಂಥಾರೂಮಿ ||
ಸ್ವಾಮಿ ನಮಾಮಿ || ಪಲ್ಲ ||
ಚಂದ್ರಸೇನಾಖ್ಯ ನೀ ಕೇಳು | ಮುಂದಿನ ಹದನ |
ಬಂದಿದೆ ದಿಬ್ಬಣವು ಬೇಗೇಳು ||
ಹಿಂದುಮುಂದೆಣಿಸದೆ ನಂದನೆಯಳ ಮುದ |
ದಿಂದಲಿ ಕೊಡುವರೆ ತೊಂದರೆ ತೊಂದರೆ || ಸ್ವಾಮಿ || 1 ||
ಹುಡುಗಿಯ ಕೊಂಡೊಯ್ಯದಿರರು | ತಡದರೆ ನಿನ್ನ |
ಹೊಡದು ಕೊಲ್ಲದೆ ಜೀವವಿಡರು ||
ಪಿಡಿದಾಯುಧದಿಂ ಪಡೆಯನು ನೋಡಲು |
ನಡನಡುಗುತ್ತಿದೆ ಪೊಡವಿಪ ಕೇಳು || ಸ್ವಾಮಿ || 2 ||
ಗುಟ್ಟಲಿ ಮರಿಯಾದಿಯಿಂದ | ನಂದನೆಯ ತಂದು |
ಕೊಟ್ಟು ಬದುಕುವದತಿ ಚಂದ ||
ಥಟ್ಟನೆ ಮನದಭೀಷ್ಟವ ನಮ್ಮೊಳು |
ಸ್ಪಷ್ಟಿಪ ನುಡಿ ಕಂಗೆಟ್ಟು ಬೆದರದೆ || ಸ್ವಾಮಿ || 3 || 129 ||

**ವಾರ್ಧಕ**
ಚರರೆಂದುದಂ ಕೇಳ್ದು ಧರಣೀಶನೆಂದ ನಿ |
ಮ್ಮರಸಗೆನ್ನಣುಗೆಯಳು ಸರಿಯಲ್ಲೆನುತ್ತ ಮೊದ |
ಲರುಹಿದುದ ಗಣಿಸದೈದರೆ ಬರಲಿ ಬಂದಂತೆ ಪೋಪುದೊಳ್ಳಿತು ಗರ್ವದಿ ||
ಅರಮನೆಯನಡರಿದರೆ ಹರಣಕೆಡರಹುದೆಂದು |
ಅರುಹಿರೆಂದೆನುತ ದೂತರ ಕಳುಹಿ ಮಂತ್ರಿಯಂ |
ಕರದೆಂದ ಚತುರಂಗ ನೆರೆಯಲೆಂಬನಿತರೊಳಗಸ್ತಮಿಸಿದಂ ದಿನಪನು || 1 || 130 ||

**ಕೇದಾರಗೌಳ - ಅಷ್ಟ**
ಇತ್ತಲಾ ಸುರನದಿಪುತ್ರನಾಜ್ಞೆಯಲಿ ಸ |
ಮಸ್ತ ಸೈನಿಕ ಸಹಿತ ||
ಮಿತ್ರೋದಯದ ಮೇಲೆನ್ನುತ್ತಲಾ ಬಾಹ್ವೆಯೊ |
ಳ್ಮತ್ತೆ ವಿಶ್ರಮಿಸಿದರು || 1 ||
ಇರಲಿತ್ತಲೀ ತೆರನರಿತು ಮಂತ್ರೀಶನ |
ತರಳೆಯಾ ಜಯಶೀಲೆಯು ||
ತೆರಳಿ ಬಂದಳು ಸಖಿಗೊರೆವೆನೀ ಹದನೆಂದು |
ಹರಚಿತ್ತವನು ಗಾಣದೆ || 2 ||
ವಿನಯದಿ ಕುಮುದಲೋಚನೆಯನ್ನು ನೋಡಿ ಮ |
ತ್ತನುಚಿತವಚನದಿಂದ ||
ಘನತರ ಕೇಡು ಸಂಜನಿಸಿತಲ್ಲಮ್ಮ ಯಿಂ |
ದಿನೊಳು ಚಿತ್ತವಿಸು ನೀನು || 3 || 133 ||

**ಸುರುಟಿ - ಏಕ**
ಕುರುರಾಯನ ದಂಡು | ಬಂದಿದೆ |
ಹೊರ ಬಾಹೆವ್ವೆಗೆ ಹಿಂಡು ||
ಗುರು ಗಾಂಗೇಯರು ತರಣಿಕುಮಾರಾ |
ದ್ಯುರುತರ ಚತುರಂಗ ಪರಿವಾರವು ಸಹ || ಕುರುರಾಯನ || 1 ||
ಧುರಕವರೊಳು ತಡದು | ಕಾದಲು |
ಪರಮೇಶ್ವರಗರಿದು ||
ಸರಸಿಜಸಂಭವ ಬರದಿಹ ಬರಹವ |
ನೊರಸಲಸಾಧ್ಯವು ಹರನೇ ಬಲ್ಲನು || ಕುರುರಾಯ || 2 ||
ಯೆನಲೆಂದಳು ಸಖಿಯೇ | ನಾನೇ |
ನೆನಲಿ ಚಂದಿರಮುಖಿಯೇ ||
ಯೆನಗುಳಿವೆತ್ನವ ವಿನಯದಿ ತಿಳುಹಿಸು |
ಘನಕೀರ್ತಿಯು ನಿನಗೆನುತಲೆ ಮರುಗಲು || 3 ||
ನೇತ್ರದೊಳಶ್ರುಗಳು | ಸುರಿಸಲು |
ಮತ್ತೊರಸುತಲಿವಳು ||
ಚಿತ್ತದಿ ತಾ ಕರಗುತ್ತುಸುರಿದಳೆಲೆ |
ಮತ್ತಕಾಶಿನಿ ಬೇಸತ್ತರೆ ಫಲವೇ || 4 || 137 ||

**ನವರೋಜು - ಏಕ**
ಆದರೊಂದಿಹುದಿನ್ನು | ನಾವು |
ಸಾಧಿಸಿ ಮಾಡುವುದೇನು ||
ಈ ದಿನ ರಿಪುಗಳೆಂತಾದರು ಕದನದಿ |
ಕಾದಿ ಗೆಲದೆ ಬಿಡರಾದಪುದಪಜಯ || 1 ||
ನೋಡು ನಿನ್ನಯ ನೆವದಿ | ಬಂತು |
ಕೇಡು ನಾವ್ ಮಂದಿರದಿ ||
ಮಾಡುವುದೇನೀ ರೂಢಿಯೊಳ್ಪಥವಿಡಿ |
ದೋಡುವ ನಿಶಿಯೊಳು ಕಾಡೊಳು ಬಿಡದೆ || 2 ||
ಅರಮನೆಯ ದೇವರನು | ಪೂಜೆ |
ವಿರಚಿಸುವ ದ್ವಿಜವರನು ||
ವರ ಕೇಶವಶರ್ಮರ ನಾವ್ ಸಂಗಡ |
ಕರಕೊಂಡೈದುವ ಹರನೇ ಸಲಹುವ || 3 || 140 ||

**ಭಾಮಿನಿ**
ಇಂತೆನುತ ಸಖಿ ನುಡಿದ ಮಾತಿಗೆ |
ಕಾಂತೆಯೊಡಬಟ್ಟಂತರಂಗದಿ |
ಸಂತಸದಿ ದ್ವಿಜವರನ ಕರೆಸಲು ತಿಳಿದು ಪೇಳಿದನು ||
ಕಾಂತೆಯರ್ನಿಮಗೇನು ಮಾರನ |
ದಂತಿಗಳು ನಡು ನಿಶಿಯೊಳೈದಲು |
ಭ್ರಾಂತಿ ಹಿಡಿಯಿತೆ ಪಾಲ್ಗೊಸರ ತಿಂದೇರ್ದುದೇ ಪಿತ್ಥ || 1 || 141 ||

**ಸಾಂಗತ್ಯ - ರೂಪಕ**
ಎನ್ನಿಂದಸಾಧ್ಯವು ಮುನ್ನ ನಾಳೆಗೆ ಪೂಜೆ |
ಯನ್ನು ಮಾಡುವರಿಲ್ಲ ಬೇರೆ ||
ಕಣ್ಣುಗಳ್ಕಾಣದಾರಣ್ಯದಿ ನಿಶಿಯೊಳ |
ಗಿನ್ನೆಂತು ನಡೆಯಲಿ ಭ್ರಮೆಯೋ || 1 ||
ಯೆನಲು ಮಂತ್ರಿಜೆ ಪೇಳ್ದಳ್ಗುಣನಿಧಿ ನಿಮ್ಮನು |
ದಣಿಸೇವು ನಮ್ಮ ರಕ್ಷಿಸಿದ ||
ಘನ ಕೀರ್ತಿ ನಿಮಗೆ ಯೆಂದೆನುತಲೊಪ್ಪಿಸುತರ |
ಮನೆಯಿಂದ ಮೂವರು ಪೊರಟು || 2 ||
ಕತ್ತಲೆಯೊಳು ದಾರಿ ಸುತ್ತಿ ಸುಳಿದು ಗುಡ್ಡ |
ಹತ್ತಿಳಿವುತ ಕಲ್ಲು ಮುಳ್ಳು ||
ಒತ್ತಿ ಕಾಲೊಳು ಕೆನ್ನೆತ್ತರು ಸೂಸೆ ಕ |
ಗ್ಗತ್ತಲೆಯೊಳಗೈದಿದರು || 3 || 144 ||

**ವಾರ್ಧಕ**
ಹಲವು ಗಿರಿ ಕಾನನಂಗಳ ಕಳಿದು ಬರುತಿರಲು |
ಜಲಜಮಿತ್ರೋದಯಂ ಕಂಡೊಡನೆ ಜಂಬುನದಿ |
ಬಳಿಯ ಉತ್ತರ ತಲ್ಪದೊಳು ಬಹಳ ಢಗೆಯಿಂದಲೇ ಮೂವರುಂ ಕುಳ್ಳಿರೆ ||
ಕಲಿತ ದಂಡ ಕಮಂಡಲದಸಾಕ್ಷ ಸೂತ್ರದಿಂ |
ಜ್ವಲನೇತ್ರನಂ ಪೋಲ್ವ ದತ್ತಾತ್ರಿಮೌನಿಕುಲ |
ತಿಲಕ ಮಜ್ಜನಕೆ ನದಿಗೈದುತಿರೆ ದುಗುಡದಿಂ ಕುಳಿತಬಲೆಯರ ಕಂಡನು || 1 || 145 ||

**ಘಂಟಾರವ - ಅಷ್ಟ**
ಯಾರಮ್ಮಾ | ನೀವು | ಯಾರಮ್ಮಾ || ಪ ||
ಯಾರಮ್ಮ ಭೂಸುರನಿವನಾರು ಪೇಳಿ |
ಊರೆಲ್ಲಿ ಜನಕನಾವವ ದುಗುಡದಲಿ ||
ಘೋರಾರಣ್ಯಕೆ ಬರೆ ಕಾರಣವೇನು |
ಸೇರಿತೇನೆಡರೆಂದು ಬೆಸಗೊಂಡನವನು || ಯಾರಮ್ಮಾ || 1 ||
ಯೆನೆ ಕುಮುದಾಕ್ಷಿ ಶೋಕದೊಳಶ್ರು ಸುರಿಯೆ |
ಮಣಿದು ಪೇಳಿದಳೆನ್ನ ವಿಧಿ ಜಗವರಿಯೆ ||
ಜನಪತಿ ಹೈಹಯವನಿಪಾಲನವನಾ |
ತನುಜೆ ಕೇಳಾ ಚಂದ್ರಸೇನನೆಂಬವನ || 2 ||
ಕುಮುದಾಕ್ಷಿ ಯೆಂದೆಂಬ ಪೆಸರೆನ್ನ ನೆವದಿ |
ಕುಮತಿ ಕೌರವನ ದಂಡೈತಂದು ಭರದಿ ||
ಸಮರದಿ ಗೆಲುವರೆನ್ನಯ್ಯಗಸಾಧ್ಯ |
ಭ್ರಮೆಗೊಂಡು ಪೊರಟೆನಿಂತಾದುದು ಚೋದ್ಯ || 3 ||
ಈಕೆ ಯೆಮ್ಮಯ ಮಂತ್ರಿ ಮಗಳೆನ್ನ ಸಖಿಯು |
ಆ ಕಾರಣಿಕರು ಕೇಶವ ಶರ್ಮ ಯತಿಯು ||
ಬೇಕೋರ್ವ ಧೈರ್ಯಕೆಂದೆನುತವರೊಡನೆ |
ನಾ ಕಡೆಗಾಣದೈತಂದೆ ಗುರುವರನೆ || 4 ||
ಹರನ ಪೋಲುವ ನಿಮ್ಮ ಗುರುತವರಿಯೆನು |
ಕರುಣಿಪುದೆನಗೊಂದು ಬದುಕುವೆತ್ನವನು ||
ನೆರೆಬಲ್ಲ ಸುಜ್ಞಾನಿಯೆಂದು ತೋರುವುದು |
ಪರಿಪಾಲಿಸೆಂದೆರಗಿದಳು ಕಾಲ್ಪಿಡಿದು || 5 || 150 ||

**ಸೌರಾಷ್ಟ್ರ - ತ್ರಿವುಡೆ**
ಎರಗೆ ಪರಸುತಲೆತ್ತಿ ಕಂಬನಿ |
ಯೊರಸಿ ನುಡಿದನು ಮಗಳೆ ನೀ ಕಳೆ |
ದಿರಿಸು ಶೋಕವ ಗಿರಿಜೆಯರಸನು | ಪೊರೆವ ನಿನ್ನ || 1 ||
ಕಾರ್ತವೀರ್ಯಾರ್ಜುನಗೆ ಕರಗಳ |
ನಿತ್ತವನು ದತ್ತಾತ್ರಿಮುನಿ ಯೆಂ |
ದರ್ತಿ ಮಿಗೆ ಪೇಳುವರು ತನ್ನನು | ಪೃಥ್ವಿಯೊಳಗೆ || 2 ||
ಇದಕೆ ಚಿಂತಿಸಬೇಡ ನೀವೀ |
ನದಿಯನುತ್ತರಿಸಲ್ಕೆ ದಕ್ಷಿಣ |
ವಿದೆ ಸಮೀಪದಿ ಕಾಮ್ಯಕಾವನ | ವದರೋಳೀಗ || 3 ||
ಪಾಂಡವರು ವನವಾಸವನು ಕೈ |
ಕೊಂಡು ನೆಲಸಿಹರಲ್ಲಿ ಪಾರ್ಥನೆ |
ಕಂಡು ಬಿನ್ನೈಸಿದರೆ ಸಲಹುವ | ಗಂಡುಗಲಿಯು || 4 || 154 ||

**ಭಾಮಿನಿ**
ಬಾಲೆ ಕೇಳೇನೆನಲಿಯಾ ಧನ |
ಪಾಲನಾತ್ಮಜ ಗಯನ ನೆವದಲಿ |
ಶ್ರೀಲಲಾಮನ ಲೆಕ್ಕಿಸದೆ ಕಾಯ್ದಮಳ ಕೀರ್ತಿಯನು ||
ತಾಳಿದನು ಹರನೊಡನೆ ಸೆಣಸಿದ |
ಶೂಲಿ ಸಮಬಲ ಪೋಗಿರೆನೆ ಮುನಿ |
ಪಾಲಗೊಂದಿಸಿ ಪಡದನುಜ್ಞೆಯ ನಡದರವರಂದು || 1 || 155 ||

**ಶಾರ್ದೂಲವಿಕ್ರೀಡಿತವೃತ್ತ**
ಜಂಬೂವಾಹಿನಿ ದಾಟಿ ತೆಂಕದೆಸೆಗಾಗಂ ಬಾಲೆಯರ್ಬರುತಿರೆ |
ಮುಂಭಾಗಂ ನಗ ಕಣ್ಗೆ ಗೋಚರಿಸಿತಂದಿಂಬಾವನಂ ಕಾಮ್ಯಕ ||
ಕಾಂತೇಯರ್ನೆಲಸಿಪ್ಪ ಪರ್ಣ ಸದನಕ್ಕಂ ತಾವು ಬರೆ ಪಾರ್ಥನು |
ಮುಂತಾ ದ್ವಾರಕಿಗೈದುದನ್ನರಿತು ಮಾಕಾಂತಂ ನಮೋ ಯೆನ್ನುತ || 1 || 156 ||

**ಜಂಜೂಟಿ - ಆದಿ**
ಹರ ಹರ ಯಿಂಥಾ ಪೂರ್ವದ ಸುಕೃತ |
ಸರಸಿಜ ಸಂಭವ ಬರದಿಹ ಲಿಖಿತ ||
ವರಮುನಿ ನೇಮದಿ ಬರಲೀ ಸಮಯದಿ |
ನರನಿಲ್ಲದೆ ಹೋದುದೆ ವಿಧಿವಶದಿ || ಹರ ಹರ || 1 ||
ಕತ್ತಲೆಯೊಳು ಕಂದೆರದವೋಲಾಯ್ತು |
ವ್ಯರ್ಥದಿ ಬಳಲಲು ಸ್ವಾರ್ಥವೇನಾಯ್ತು ||
ಪೃಥ್ವಿಸುರೋತ್ತಮ ನೀವೆನಗಾಗಿ |
ಹೊತ್ತಿಲಿ ಬಳಲಿದಿರ್ಸಾಕು ನೀವ್ ಪೋಗಿ || 2 ||
ಆಶೆಯನುಳಿದೆನ್ನೊಳ್ಳಖಿಯೇ ನೀನಿಂದು |
ದೇಶಕ್ಕಿವರ ಕೂಡೆ ಪೋಗು ಸಾಕೆಂದು ||
ಸೂಸುತ ಕಂಬನಿ ಯೆನಲದ ಕೇಳಿ |
ಆ ಸತಿ ನುಡಿದಳು ಕ್ಲೇಶವ ತಾಳಿ || 3 || 159 ||

**ಸೌರಾಷ್ಟ್ರ - ಅಷ್ಟ**
ಪ್ರಾಣವಿದ್ದನಕ ಭೈಷಜ ಮಾಡದುಳಿವರಿ | ದೇನಿದವ್ವಾ || ವಿಧಿ |
ಯೇನೆಂದು ಬರೆದಿಹನೆಂಬುದನರಿವೆಯ | ಯೇನಿದವ್ವಾ || 1 ||
ಅಡಸಿದಾಪತ್ತಿಲಿ ಬಿಡದೆ ಧೈರ್ಯದೊಳಿಹು | ದೇನಿದವ್ವಾ || ಚಿಂತೆ |
ಪಡಲೀಗ ನೆಲೆಯುಂಟೆ ಜಡಜಾಕ್ಷಿಯರಿಯೆಯ | ಯೇನಿದವ್ವಾ || 2 ||
ನರನಿಲ್ಲದಿರೆ ಮಿಕ್ಕವರಿಗೆ ದೂರುವ ಬೇಗ | ಯೇನಿದವ್ವಾ || ಯೇಳು |
ತ್ವರಿತದೊಳೆನಲೊಪ್ಪಿ ತರಳೆಯರ್ಬಂದರಂ | ದೇನಿದವ್ವಾ || 3 || 162 ||

**ವಾರ್ಧಕ**
ಬರೆ ಪರ್ಣಮಂದಿರದ ಹೊರವಳಯದೊಳು ಪುಳಿಂ |
ದರ ವೆರಸಿ ಮರುತಸುತನಿರೆ ಕಂಡು ದುಃಖಿಸುತ |
ಎರಡನೆಯ ಮೃಡಮೂರ್ತಿ ಪರಿಪಾಲಿಸೆಂದೆನುತ ಚರಣದೊಳು ಪೊರಳ್ವಬಲೆಯ ||
ಪರಿಕಿಸುತಲೆತ್ತಿ ನಿನ್ನೊಡರಿಗೆನ್ನಯ ತಲೆಯ |
ತೆರುವೆನಿದೆ ಬಿಡು ಚಿಂತೆ ನುಡಿ ಬಂದ ಹರಿಬವನು |
ತರಳಾಕ್ಷಿ ನೀನ್ಯಾವಳೆಂದು ಬೆಸಗೊಳಲೆಂದಳಳುತಳುತ ಬಿಕ್ಕಿಬಿರಿದು || 1 || 163 ||

**ಕಾಂಬೋಧಿ - ಝಂಪೆ**
ಚಿತ್ತವಿಸು ಮಾಹಿಷ್ಮತೀಶನೇ ತನ್ನುವನು |
ಪೆತ್ತ ಪಿತ ಚಂದ್ರಸೇನಾಖ್ಯ ||
ಹಸ್ತಿನಾಪುರವಾಳ್ವ ಪೃಥ್ವಿಪತಿಗೆನ್ನ ಕೊಡ |
ಲಿತ್ತ ಮೊದಲಾಗಿ ಮಾತುಗಳ || 1 ||
ಮೊದಲು ನಾ ತಿಳಿಯಲಿಲ್ಲದರಮೇಲ್ಸಖಿಯಳಿಂ |
ದುದರಿಂದ ಕುರುನೃಪನ ಗುಣವ ||
ಮದಮುಖನು ಕುಹಕಿ ಯೆಂಬುದರಿಂದ ಪಿತನೊಡನೆ |
ವದಗಿ ತಿಳುಹಿದೆನದಕೆ ಬಳಿಕ || 2 ||
ಬಿಡದೆ ಚರರಿಂ ಸುತೆಯ ಕೊಡೆನೆಂದು ತಿಳುಹಿಸಲು |
ಕಡುಕೋಪ ತಾಳಿ ಸೈನಿಕವ ||
ವಡಗೂಡಿ ಬಂದಿರುವ ಕಡುಪರಾಕ್ರಮಿಗಳವ |
ರೊಡನೆ ಸೆಣಸಲ್ಕರಿದು ಪಿತಗೆ || 3 || 166 ||

**ಕೇದಾರಗೌಳ - ಅಷ್ಟ**
ಹರಚಿತ್ತಗಾಣದೆ ಗುರುರಾಯನೊಡಗೂಡಿ |
ಸರಿ ರಾತ್ರಿಯೊಳು ಬಂದೆವು ||
ಕರುಣಾಳು ದತ್ತಾತ್ರಿಯೊರದನಿಲ್ಲಿಗೆ ಬರು |
ವರೆ ಧೈರ್ಯವಚನಗಳ || 1 ||
ಕೈರವಾಂಬಕಿಯೆಂದು ಕರೆವರೆನ್ನನು ಯಾದ |
ವರ ವಂಶದವನಯ್ಯನು ||
ಕರುಣಿಸು ಶಶಿವಂಶೋದ್ಧರನೆ ಯೆನ್ನುತ ನೀರೆ |
ಚರಣದೊಳೆರಗಿದಳು || 2 ||
ಪುನರಪಿ ಪಿಡಿದೆತ್ತಿ ವಿನಯದೊಳೆಂದನು |
ತನುಜಾತೆಗೆಣೆ ನೀನಿಂದು ||
ದಣಿದೆ ಸಾಕೆಂದಶ್ರುವನು ಕೈಯಿಂದೊರಸುತ್ತ |
ಲನಿಲಸಂಭವನೆಂದನು || 3 || 169 ||

**ಭಾಮಿನಿ**
ತರಳೆ ಕೇಳ್ನಿನ್ನಯ್ಯ ಕುರುಪತಿ |
ಗೆರಡನೇ ತಿರಸ್ಕರಿಸಿದುದ ಬಾ |
ಹಿರರು ನುಡಿವರು ನುಡಿಗೆ ತಪ್ಪಿದನೆಂದು ಸುಡಲಿದನು ||
ಮರುಗದಿರು ನಾ ನಿನ್ನೆಡರ ಪರಿ |
ಹರಿಸದಿರೆ ಶಶಿಕುಲಜನೇ ಭೀ |
ಷಣ ಗದಾದಂಡವನು ಪಿಡಿಯೆನೆನುತ್ತ ಘರ್ಜಿಸಿದ || 1 || 170 ||

**ಸೌರಾಷ್ಟ್ರ - ತ್ರಿವುಡೆ**
ಕುರುಪತಿಗೆ ಸುಜನರನುಪದ್ರಿಸ |
ದಿರಲು ಬಾರದು ನಿದ್ರೆ ಮೂರ್ಖರ |
ಗುರುವಲಾನದನೊರದರೇನ್ಫಲ | ಸರಸಿಜಾಕ್ಷಿ || 1 ||
ಹೆಡತಲೆಯೊಳಡರಿಹುದು ಮೃತ್ಯುವು |
ಮಡದಿ ಗಾಂಧಾರಿಯಳು ಪಡದಿಹ |
ಪಡೆಯನಿಂದಿಲಿ ಬಡಿದು ದಿಗುಬಲಿ | ಗೊಡುವೆ ಸಿದ್ಧ || 2 ||
ಯೆಂದೆನಲು ಪೇಳಿದಳು ಯೆನ್ನಯ |
ತಂದೆಯನು ಕಾಳಗದೊಳೀದಿನ |
ಕೊಂದರೋ ಕೊಂಡೊಯ್ದರೋ ಕಡೆ | ಗೆಂದೆನಲ್ಕೆ || 3 || 173 ||

**ಸಾಂಗತ್ಯ - ರೂಪಕ**
ಮಾತ ಕೇಳುತಾ | ಮರುತ ನಂದನ ||
ಭೂತಳೇಶನಾದ ಧರ್ಮ | ಜಾತಗೆರಗುತ || 1 ||
ಅಣ್ಣ ಲಾಲಿಸಿ | ಕನ್ನೆ ದುಃಖದಿ ||
ತನ್ನೊಳೆಂದ ನುಡಿಗಳೆಲ್ಲ | ವನ್ನು ಕೇಳ್ವರೆ || 2 ||
ಕರುಣಿಸಪ್ಪಣೆ | ಕುರುಕುಲೇಂದ್ರರ ||
ಪರಿಕಿಸುತ್ತ ಬರುವೆನೆನಲು | ವರದ ಧರ್ಮಜ || 3 || 176 ||

**ಕಾಪಿ - ಅಷ್ಟ**
ನೀತಿವಿಚಾರವನರಿದು | ವಿ |
ಖ್ಯಾತಿಗೊಂಬುದು ಮುಂದೆ ಲೇಸಾಗಲೊಲಿದು ||
ಪ್ರೀತಿಯಿಂ ಹೋಗಿ ಬಾರೆಂದು | ಧರ್ಮ |
ಜಾತ ವೀಳ್ಯವನಿತ್ತು ಕಳುಹಿದನಂದು || 1 ||
ಬಳಿಕಲೆಮಜ ನಕುಲನನು | ಕರ |
ದನುಜ ಕೇಳ್ವರಲೆಲ್ಲವೈ ಫಲುಗುಣನು ||
ಘನ ಬೇಗ ಪೋಗಿಂತಾದುದನು | ಪೇಳೀ |
ಕ್ಷಣದಿ ಬಾರೆಂದು ನೇಮಿಸಿ ಕಳುಹಿದನು || 2 ||
ಅಷ್ಟರೊಳಭಿಮನ್ಯು ಸಹಿತ | ಶ್ರೀ |
ಕೃಷ್ಣ ಪಾರ್ಥರು ಬರೆ ಧರ್ಮಸಂಜಾತ ||
ಇಷ್ಟದಿ ಮನ್ನಿಸಿ ಕೇಳ್ದ | ಕ್ಷೇಮ |
ವಷ್ಟೆ ದ್ವಾರಕಿಯೊಳೆಂದತಿ ತೋಷ ತಾಳ್ದ || 3 || 179 ||

**ವಾರ್ಧಕ**
ಮುರಮಥನ ಕೇಳು ಹೈಹಯದೇಶ ಯದುವಂಶ |
ದರಸಾದ ಚಂದ್ರಸೇನನು ಸುತೆಯ ನೆವದಿ ಕುರು |
ಧರಣೀಶಗವಗು ಸಂಗ್ರಾಮವಾ ಸುದತಿಯಳಿಗನಿಲಜಂ ಭಾಷೆಯಿತ್ತು ||
ತೆರಳಿಹಂ ಗುರು ಭೀಷ್ಮ ಕರ್ಣಾದಿ ನಾಯಕರ |
ಧುರವಿಜಯವೆಂತಹುದೊ ದೇವ ನೀನೇ ಬಲ್ಲೆ |
ಕರುಣಿಪುದೆನಲ್ಕೇಳ್ದು ನರನೆಂದನಗ್ರಜಗೆ ಕೈಗಳಂ ಜೋಡಿಸುತ್ತ || 1 || 180 ||

**ಅಹೇರಿ - ಝಂಪೆ**
ಕರುಣಿಸೊಲಿದು ತನಗೆ ನೇಮವ | ಇದಿರು ನಿಂತು |
ಮರುತಸುತನ ತಡದು ಕಾದುವ ||
ಧುರಸಮರ್ಥರ್ಯಾರೆನುತ್ತ |
ಪರಿಕಿಸುವೆನು ಹಿಂದೆ ನಾನು |
ಕುರುಮಹೀಶಗೆರಕವಾದ |
ತರಣಿಜಾದ್ಯರಥಟನಿಂದು || ಕರುಣಿಸೆನಗೆ || 1 ||

ಯೆನಲು ಮೆಚ್ಚಿ ಯಮಜ ಹಿಗ್ಗುತ | ನುಡಿದ ನಿನ್ನ |
ನೆನದು ಬಾರನ್ಯಾತಕೆನ್ನುತ ||
ಜುಣುಗಿ ನಕುಲನನ್ನು ಬಿಟ್ಟು |
ಯನಿತರೊಳಗೆ ಬಂದಿರಷ್ಟು |
ಮನಕೆ ಹರುಷವಾಯ್ತು ಪೋಗು |
ಅನಿಲಸುತನ ಬೆಂಬಲಕ್ಕೆ || 2 ||
ಬಳಿಕಲಂತಕಾತ್ಮಜಾತನು | ವಂದಿಸುತ್ತ |
ಜಲಜನಾಭನೊಡನೆ ನುಡಿದನು ||
ಫಲುಗುಣನ್ನ ಕೂಡಿ ರಣವ |
ಗೆಲುವ ಕೀರ್ತಿ ನಿಮ್ಮ ಚರಣ |
ನಳಿನಯುಗಳಕೆನಲು ಮೆಚ್ಚಿ |
ತಳುವದಂದು ಪೊರಡಲಾಗ || 3 || 183 ||

**ಭಾಮಿನಿ**
ನರಮುರಾಂತಕರೊಡನೆ ಬಲುಚಾ |
ಲ್ವರಿದು ಕೇಳದೆ ಛಲದಿ ಪೊರಡಲು |
ತರಳನಭಿಮನ್ಯುವನು ಜತೆಗೊಂಡೈದುತಿರಲಿತ್ತ ||
ತರಣಿಯುದಯದಿ ನಿತ್ಯಕರ್ಮವ |
ವಿರಚಿಸುತ ಕುರುನೃಪತಿ ಚಾರರ |
ಕರದು ಕಳುಹಲು ಬಂದು ನುಡಿದರು ಚಂದ್ರಸೇನಂಗೆ || 1 || 184 ||

**ಮಾರವಿ - ಆದಿ**
ಚಂದ್ರಸೇನನೆ ನೀನಿಂದ್ಯಾತಕೆ ಬಕ |
ದಂದದಿ ಸುಮ್ಮನೆ ಕುಳಿತಿರುವಿ ||
ನಂದನೆಯಳ ಕೌರವೇಂದ್ರಗೆ ಕೊಟ್ಟರೆ |
ಇಂದು ನೀ ಸಾಯದೆ ಬದುಕಿರುವಿ || 1 ||
ಒಂದೊಂದ್ಯುಕ್ತಿಯ ತಂದರೆಯದು ತುದಿ |
ಹೊಂದದು ಜಾಗ್ರತೆ ಯಿರಬೇಕು ||
ಬಂದಿಹ ಮಂದಿಯ ನಿಂದಾಲಿಸೆ ನೂ |
ರೊಂದು ಬಲಿಯನೆ ತೆಗಿಬೇಕು || 2 ||
ಹುಡುಗಿಯನೀವೆಯೊ ಕೊಡುವೆಯೊ ಯುದ್ಧವ |
ತಡವಹುದೆವಗೇ ನುಡಿ ಬೇಗ ||
ಪಿಡಿ ಚಾಪವ ಸಂಗಡ ಚತುರಂಗದಿ |
ತಡವೇನೆನಲಾ ಪೊಡವಿಪನೆಂದನು || 3 || 187 ||

**ಕಾಂಬೋಧಿ - ಝಂಪೆ**
ಏನೆಲವೊ ಪುನರಪಿ ನಿಧಾನಿಸದೆ ನಿನ್ನ ಪೇ |
ಳ್ದಾ ನುಡಿಯ ಮರವರೇ ಸಾಕು ||
ಯೇನಾದರಣುಗೆಯಳನಾ ನೃಪಗೆ ಕೊಡೆನದನು |
ಮಾಣದರುಹಿಸಿ ನಿಮ್ಮ ದೊರೆಗೆ || 1 ||
ಯೆಂದವರ ಕಳುಹುತ್ತ ಮಂದಿಮಾರ್ಬಲ ನೆರೆಯ |
ಲೆಂದು ನೇಮವನಿತ್ತು ಭರದಿ ||
ವಂದಿಜನ ಕೈವಾರದಿಂದ ಘೋರ್ಗರೆವ ರಣ |
ದುಂದುಭಿಯ ಮೊಳಗಿಸುತ್ತ || 2 ||
ಚರರ ಮುಖದಿಂ ವಳವನರಿತು ಕುರುಪತಿಯಾಜ್ಞೆ |
ವರಿಸಿ ದಿಗ್ದೆಸೆ ಕಂಪಿಸಲ್ಕೆ ||
ಪುರವ ಮುತ್ತಿದರು ಜರಿದುರುಳಿಚುತ ಕೋಟೆಯನು |
ಪರಿಭವಿಸಿ ತಡದ ಪಟುಭಟರ || 3 || 190 ||

**ಶಂಕರಾಭರಣ - ಮಟ್ಟೆ**
ಅನಕ ಚಂದ್ರಸೇನನವರು ರಣದೊಳರಿಗಳ |
ವನಧಿಯನ್ನು ಪೊಕ್ಕು ಕದಡೆ ಘನ ಚತುರ್ಬಲ ||
ಜುಣುಗಿ ಹಿಂದೆ ಸರಿದು ಬಲವನಿನಜ ನೋಡುತ |
ಮಣಿರಥವನಡರ್ದು ಗಜರಿ ಕಣೆಯ ಗರವುತ || 1 ||
ಬರಲು ಬಲವು ನಿಲ್ಲದೋಡುತಿರಲು ಕಾಣುತ |
ಭರದಿ ಸಚಿವ ಚಿತ್ರಬಾಹು ಉರಿಯನುಗುಳುತ ||
ಸರಿವ ಸೈನ್ಯಕಭಯವಿತ್ತು ತರಣಿತನಯನ |
ಸರಿಸದಿಂದ ತಡದು ನುಡಿದ ಧುರಸಮರ್ಥನ || 2 ||

ಯೆಲವೊ ವೀರ ಚಾತುರಂಗ ಬಲವ ಗರ್ವದಿ |
ಗೆಲಿದ ಶೌರ್ಯ ತೋರು ತನ್ನೊಳಳವಿ ಮಧ್ಯದಿ ||
ತಿಳಿಯೆ ನಿನ್ನ ಕಂಡುದಿಲ್ಲ ತಿಳುಹು ನಿಜವನು |
ತಳುವದೆನಲು ಕೇಳಿ ಕರ್ಣ ಮುಳಿದು ನುಡಿದನು || 3 || 193 ||

**ಭೈರವಿ - ಅಷ್ಟ**
ಮುನಿ ಕಾಶ್ಯಪನ ಬಲ್ಲೆಯಾ | ಆತನ ಸುತ |
ದಿನಮಣಿಗರಿತಿಹೆಯಾ ||
ನೆನೆಯಲಾತನೊಳು ಸಂ | ಜನಿಸಿದ ಕರ್ಣನೆಂ |
ದೆನುವರು ನೀನ್ಯಾರೆಲಾ || 1 ||
ಶೀತಾಂಶು ಸೇನಾಖ್ಯನ | ಸಚಿವನೆಂದು |
ನೀ ತಿಳಿದಪುದು ಮುನ್ನ ||
ಖ್ಯಾತಿಯೊಲ್ಲದೆ ನೀವು | ನೀತಿ ಪೇಳದೆ ಬಂದು |
ದ್ಯಾತಕೋಸುಗ ಧುರಕೆ || 2 ||
ಆಡಿದ ಭಾಷೆಯನು | ತಪ್ಪುವುದಿದು |
ರೂಢಿಯೊಳ್ಸಹಜವೇನು ||
ನೋಡು ನಿಮ್ಮಂತೆ ಮಾ | ತಾಡಿ ತಪ್ಪೆವು ನಾವು |
ಗಾಢವಿದೆನಲೆಂದನು || 3 ||
ಬಾಲೆಯನೀಯದಿರೆ | ಬಲಾತ್ಕಾರ |
ದೋಳೀಗ ನಡಸುವರೆ ||
ತಾಳಿಕೊಳ್ಳೆಂದಂಬು | ಮಾಲೆಯ ರವಿಜನ |
ಮೇಲೆ ತಾ ಮುಸುಕಿದನು || 4 ||
ತರಳೆಯ ಕೊಡದರಿಂದು | ಕೊಂಡೊಯ್ಯದೆ |
ಮರಳೆವು ಬೇಗ ತಂದು ||
ಕುರುಪತಿಗೀಯೆಂದು | ಬರುವಂಬುಗಳ ಕಡಿ |
ದಿರದೆ ನಾಲ್ಕಡಿ ಯೆಚ್ಚನು || 5 || 198 ||

**ಭಾಮಿನಿ**
ಬರುವ ಕೋಲ್ಗಳ ಕಡಿವನಿತರೊಳು |
ತರಣಿನಂದನ ಸೆಳದು ಪರಿಘವ |
ತಿರುಹಿಡಲು ಬಂದೆರಗೆ ಮೂರ್ಛೆಯೊಳೊರಗೆ ಮಂತ್ರೀಶ ||
ಧುರದಿ ಸೈನ್ಯವನೊತ್ತಿ ಮುಂದೈ |
ತರುವ ಕರ್ಣನ ಕಂಡು ಧರಣೀ |
ಶ್ವರನ ಸುತ ರವಿವರ್ಮನೆಂದನು ಸುಪ್ರತಾಪದಲಿ || 1 || 199 ||

**ಮಾರವಿ - ಏಕ**
ಎಲೆ ವೀರನೆ ಭುಜಬಲವಿರ್ದರೆ ನೀ |
ನಿಲು ತನಗಿದಿರಾಗಿ ||
ಹುಲುಬಲದೊಳಗೇನ್ಫಲ ಕೀರ್ತಿಯೆ ನಿನ್ನ |
ಕೆಲಸಗಳಾಯ್ತೇನೋ || 1 ||
ಬೇರರಿದರೆ ಮರ ಜಾರದೆ ನಿಲುವುದೆ |
ಸಾರವರಿಯೆ ನೀನು ||
ತೋರುವೆನದರ ವಿಚಾರವ ನಿನ್ನೊಡ |
ನ್ಯಾರು ಕೇಳಿದರೆಲವೊ || 2 ||
ಉತ್ತರಕುತ್ತರವಿತ್ತರೆ ನೆನಹಿಗೆ |
ಸ್ವಾರ್ಥಕವೇನಹುದು ||
ಕೃತ್ರಿಮದಲಿ ಮನವರ್ತಿಪ ಮೂಢಗೆ |
ಹೊತ್ತುಗಳೆಯಲಹುದು || 3 ||
ಆದಿಯೊಳ್ಪಳಲುತ ಸಾಧಿಸದುಳಿದರೆ |
ಯಾದಪುದೇ ಸಫಲ ||
ಕ್ರೋಧವಿಲ್ಲದೆ ಶೌರ್ಯೋದಯ ದೊರವುದೆ |
ಕಾದಿ ನೋಡೆನಲೆಂದ || 4 ||
ಕುರುಪತಿಯನು ನೀವು ನರಬಲಿಗೊಡುವಿರಿ |
ಪರಿಕಿಸದರನೆಂದು ||
ಸುರಿದನು ಕೋಲ್ಗಳ ಗರುಡಿಯೊ ಯೆನೆ ಬೊ |
ಬ್ಬಿರಿದು ಮರಳಿ ಮರಳಿ || 5 || 204 ||

**ಶಂಕರಾಭರಣ - ಮಟ್ಟೆ**
ಬರುವ ಕೋಲ್ಗಳನ್ನು ನಡುವೆ ತರಿದು ಕರ್ಣನು |
ಪರಿಕಿಸೆನುತ ಮೋಹನಾಸ್ತ್ರ ಭರದೊಳೆಚ್ಚನು ||
ವರ ರಥಾಗ್ರದಲ್ಲಿ ಮೂರ್ಛೆ ಧರಿಸುತೊರಗಿದ |
ಧರಣಿಪಾಲ ಚಂದ್ರಸೇನ ಖತಿಯ ತಾಳಿದ || 1 ||
ತಡೆದು ಕರ್ಣಗೆಂದ ನಮ್ಮ ಪಡೆಯ ಗೆಲಿದವ |
ದಡಿಗ ನೀನೆ ನಿಲ್ಲು ನಿನ್ನ ಕಡುಹು ನೋಡುವ ||
ತೊಡು ತೊಡೆನುತ ದಿವ್ಯ ಕಣೆಗಳೊಡನೆ ಮುಸುಕಲು |
ಕಡಿದು ರವಿಜನೆಂದ ಪಂಥವಿಡಿದು ನೃಪನೊಳು || 2 ||
ಮುನ್ನ ಮಾತನಿತ್ತು ಮರಳಿ ಗಣ್ಯವಿಲ್ಲದೆ |
ತನ್ನ ಧೃತಿಯನುಳಿದು ನೀತಿಯನ್ನು ಮೀರಿದೆ ||
ಕನ್ನೆಯಳನು ತಂದು ಕೊಟ್ಟು ಮನ್ನಿಸಾದರೆ |
ತನ್ನ ಬಲುಹು ಕಾದಿ ನೋಡು ಮಾನ್ಯನಾದರೆ || 3 ||
ತರುಣಿ ನೆವದಿ ಹರಣದಾಶೆ ಮರವರೇನೆಲ |
ಮರಳೆ ಲೇಸೆನುತ್ತ ಸುರಿದನುರಿವ ಕೋಲ್ಗಳ ||
ತರಿದು ಮರಳಿ ರವಿಜನವನ ಕರದ ಚಾಪವ |
ಮುರಿದು ತೇರ ಕಡಿದು ಹಾಯ್ದು ಉರಗ ಪಾಶವ || 4 || 208 ||

**ವಾರ್ಧಕ**
ಭರಸೆಳದು ಸುತ್ತಿ ಬಿಗಿವನಿತರೊಳು ಕಲಿಭೀಮ |
ನುರು ಗದಾದಂಡವಂ ಪೆಗಲಿಗೇರಿಸಿ ಮುನಿದು |
ತರಳೆಯರ್ವೆರಸಿ ರಣಭೂಮಿಗೈತಂದ ಕೆಂಪೇರಿದಾಲಿಗಳಿಂದಲಿ ||
ನೆರದ ಸೈನ್ಯವ ನೋಡಿ ತರಣಿತನಯನ ಕಂಡು |
ಧರಣಿ ಕಂಪಿಸೆ ಸಿಂಹನಾದವಂ ಗೈಯಲ್ಕೆ |
ಕುರುಸೇನೆ ಪರವಶಂಗೊಳೆ ನುಡಿದನೆಲೆ ಕರ್ಣ ಸಹಸಿಯೈ ಸಹಸಿ ಯೆನುತ || 1 || 209 ||

**ಭೈರವಿ - ಏಕ**
ಎಲೆ ಕರ್ಣನೆ ನೀನಿಂದು | ಸಾಕಿ |
ಸಲಹಿದೆ ಕುರುಪತಿಗೊಂದು ||
ಫಲ ಮದುವೆಯ ಮಾಡಿಸಲು | ಬಂದು |
ಮಲೆತೆಯ ತನ್ನಿದಿರಿನೊಳು || 1 ||
ಮೂರ್ಖನೆ ಕೇಳ್ನಿನ್ನುವನು | ಯಿಂ |
ದ್ಯಾರ್ಕರಸಿದರೆಂಬುದನು ||
ತಾರ್ಕಣಿಯೊಳು ನಿಂದಿಪರೆ | ನಿನ್ನ |
ಬೇರ್ಕಡಿಯದೆ ಬಿಡೆನೊದರೆ || 2 ||
ಕುಲಗೆಡುತಲೆ ಕೌರವನ | ಮನೆ |
ಯೊಳಗಿಹ ಧನಧಾನ್ಯವನ ||
ಸುಲಿದುಂಡುದಕಿಂದಿನಲಿ | ದಿಗು |
ಬಲಿಯಿತ್ತಪೆಯೊದಗಿಲ್ಲಿ || 3 ||
ದುರುಳೆ ಹಿಡಿಂಬೆಯ ಕೂಡಿ | ಬಕಾ |
ಸುರನೆಂಜಲ ಸವಿದೋಡಿ ||
ತಿರುಗಿ ಭಿಕ್ಷಂಗಳ ಬೇಡಿ | ಜಾತಿ |
ವಿರಹಿತ ಬಾಹಿರ ಹೇಡಿ || 4 ||
ಕುರುಪತಿಯನು ಖೇಚರನು | ಬಿಗಿ |
ದಿರಲೆಲ್ಯಡಗಿದೆ ನೀನು ||
ಪರಿಕಿಸಬಹುದಳವಿಯಲಿ | ನಿ |
ಲ್ಲರೆನಿಮಿಷದೊಳೆನೆ ಕನಲಿ || 5 ||
ತರುಣಿಯ ದುಶ್ಯಾಸನನು | ಬಲು |
ನೆರದ ಸಭೆಯೊಳುಯ್ದುದನು ||
ಭರ ಸೆಳೆಯಲು ನೀ ಜೀವ | ಯಿರು |
ತಿರುವೆಯೊ ಸುಡು ವೆಗ್ಗಳವ || 6 ||
ತಿಳಿಯದೆ ಗಳಹದಿರಿದುವೆ | ನೀತಿ |
ನೆಲೆಗಳ ನೀನೇನರಿವೆ ||
ತಲೆಗೆರದಿಹ ವಾರಿಯದು | ಪದ |
ಕಿಳಿವುದು ತಾಳೆನೆ ಮುಳಿದು || 7 || 216 ||

**ಭೈರವಿ - ಅಷ್ಟ**
ಮಾತಿಗೆ ಮಾತಿತ್ತರೆ | ಮುಂದಿನ ಕಾರ್ಯ |
ಕೇತರ ಫಲ ವದರೆ ||
ನೀ ತಾಳಿಕೊಳ್ಳೆಂದು | ನೂತನ ಮಾರ್ಗಣ |
ವ್ರಾತವ ಕವಿಸಿದನು || 1 ||
ಬರುವಂಬುಗಳ ಕಾಣುತ್ತಾ | ಮಾರುತಿ ದಿವ್ಯ |
ಶರದಿ ಖಂಡಿಸಲು ಮತ್ತಾ ||
ಮರಳಿ ತೊಟ್ಟಡೆ ಭೀಮ | ಮುರಿಯೆ ಮತ್ತೂ ಮತ್ತು |
ಸುರಿದನು ಕಡೆಯಿಲ್ಲದೆ || 2 ||
ಧೃತಿಗೆಟ್ಟು ಮರುತಜನು | ಅಂಬಿನ ಮೊನೆ |
ಹತಿಯಿಂದ ಗಜರಿ ತಾನು ||
ಖತಿತಾಳಿ ಕರ್ಣನ | ರಥಕೆ ಲಂಘಿಸಿ ಕರ |
ಧೃತ ಕೋದಂಡವ ಸೆಳದು || 3 || 219 ||

**ಭಾಮಿನಿ**
ಘುಡ ಮೊಗೇರರ ಮಗನೆ ಕೊಳ್ಳೆಂ |
ದೊಡನೆ ನೆತ್ತಿಯೊಳೆರಗೆ ಚೇತನ |
ವಡಗಿ ಧೊಪ್ಪನೆ ಕೆಡದನವನರುಣಾಂಬುಪೂರದಲಿ ||
ಕೊಡನ ಸುತ ವಿದುರಾದಿಗಳು ಕಂ |
ಗೆಡುತ ಹಾ ಹಾ ಯೆನಲು ಕೇಳುತ |
ಪೊಡವಿಪತಿ ಕುರುರಾಯಗೆಂದನು ಗಂಗೆಯಾತ್ಮಜನು || 1 || 220 ||

**ಘಂಟಾರವ - ಆದಿ**
ಕೆಲಸ ಕೆಟ್ಟು ಹೋದುದಯ್ಯ | ಕೌರವೇಂದ್ರ | ನಿನ್ನ |
ತಲೆಯ ಬರಹ ಮಾಳ್ಪುದೇನು | ಕೌರವೇಂದ್ರ ||
ತಿಳಿಯದಿಲ್ಲಿ ಬಕಮಾರಿಯನು | ಕೌರವೇಂದ್ರ | ತಂದು |
ನಿಲಿಸಿದ್ಯಾರು ನಮ್ಮೊಳಿದಿರು | ಕೌರವೇಂದ್ರ || 1 ||
ಸುಮ್ಮನಹುದೆ ನಿನ್ನೀ ಕೆಲಸ | ಕೌರವೇಂದ್ರ | ಮುಂದೆ |
ನಮ್ಮ ಪುಣ್ಯ ಪೇಳಿ ಫಲವೇ ಕೌರವೇಂದ್ರ ||
ಒಮ್ಮೆ ದಾರಿ ಕಾಣೆನಿದಕೆ | ಕೌರವೇಂದ್ರ | ಧುರದೊ |
ಳೆಮ್ಮ ಮಾನ ಉಳಿವುದೆಂತು | ಕೌರವೇಂದ್ರ || 2 ||
ಬಂದು ಸಿಕ್ಕಿಬಿದ್ದೆವಾವು | ಕೌರವೇಂದ್ರ | ಇದರ |
ಮುಂದೆ ಮಾಳ್ಪ ದಾರಿಯೇನು | ಕೌರವೇಂದ್ರ ||
ನಿಂದು ಧುರದಿ ಕಾದುವೆವು | ಕೌರವೇಂದ್ರ | ಜಯವ |
ಹೊಂದುವವದು ದೈವಾಧೀನ | ಕೌರವೇಂದ್ರ || 3 || 223 ||

**ಭೈರವಿ - ಝಂಪೆ**
ಅನಕ ಕೃಷ್ಣಾರ್ಜುನರು ತನಯನಭಿಮನ್ಯು ಸಹಿ |
ತನುವಿಂದ ಚಂದ್ರಸೇನನ ಪುರಕೆ ಬರಲು ||
ಜನಪತಿಯು ಸಂತೋಷವನಧಿಯಲಿ ಮುಳುಗುತ್ತ |
ಮನವಲಿದು ಮನ್ನಿಸಿದನಲಘು ಪ್ರೀತಿಯಲಿ || 1 ||
ಅರಿತು ಕುಮುದಾಕ್ಷಿ ಘನ ಹರುಷ ಮಿಗಲೈತಂದು |
ಹರಿಚರಣಕೊಂದಿಸುತಲೆರಗಿ ಪೇಳಿದಳು ||
ಕಿರಿಯಣ್ಣನವರಿಲ್ಲಿ ಕರುಣದಲಿ ಬಂದಿರೈ |
ಅರಿನೃಪರ ಭೀತಿಗಳು ಹರಿವಾಯ್ತು ಬಳಿಕ || 2 ||
ಕುಶಲವೇ ಹಿರಿಯಯ್ಯ ವಸುದೇವರಿಂಗೆ ಸುಖ |
ದೆಸುಗೆಯೇ ಹಿರಿಯಣ್ಣ ವಸುಧೆಪಾಲಕಗೆ ||
ಕುಸುಮಗಂಧಿಯರು ಸಹಿತೊಸಗೆ ಕ್ಷೇಮಿಗಳೆ |
ಪಶುಪತಿಪ್ರಿಯ ತನ್ನೊಳುಸುರೆನಲ್ಕೆಂದ || 3 || 226 ||

**ಕೇದಾರಗೌಳ - ಅಷ್ಟ**
ಕೇಳವ್ವ ತಂಗಿ ನೀ ಶೂಲಿಯ ದಯದಿ ನ |
ಮ್ಮೇಳಿಗೆ ಸುಕ್ಷೇಮವು ||
ಖೂಳ ಕೌರವನಿಲ್ಲಿ ಕಾಳಗಕೈತಂದ |
ಮೇಲೆ ನಾವರಿತಿದನು || 1 ||

ಹಲವು ಸಂಗತಿಯೆಲ್ಲ ತಿಳಿದು ಬಂದಿಹೆವಮ್ಮ |
ಫಲುಗುಣ ಸಹಿತವಾಗಿ ||
ಕೊಳುಗುಳವನು ನೋಡಿ ಘಳಿಲನೆ ಬಹೆವಿಲ್ಲಿ |
ಗಲಸದೆ ಭೋಜನಕೆ || 2 ||
ಯೆಂದುಸುರ್ದಾಗ ಮುಕುಂದಾರ್ಜುನರು ತಾವು |
ಚಂದ್ರಸೇನನು ಸಹಿತ ||
ಬಂದು ಭೀಮನ ಕಂಡು ವೊಂದಾಗಿ ಮೊಳಗಿದ |
ರಂದು ಶಂಖಧ್ವನಿಯ || 3 || 229 ||

**ವಾರ್ಧಕ**
ನಡುಗಿತು ಜಗತ್ರಯಂ ನೋಡಿ ಖಿಡಿಯಿಡುತಂದು |
ಕೊಡನಾತ್ಮಭವ ಪಾರ್ಥನೊಡನೆ ಭೀಮನ ವಿದುರ |
ತಡೆಯೆ ರವಿವರ್ಮನಶ್ವತ್ಥಾಮನಂ ಕೆಣಕೆ ಚಿತ್ರಬಾಹುವನು ರಣದಿ ||
ಪೊಡವಿಪತಿ ಕೌರವಾನುಜ ತಡೆಯೆ ವಿಧುಸೇನ |
ನೊಡನೆ ಕುರುಪತಿ ನಿಲಲು ಭೂರಿರವ ಹೆಚ್ಚಿದುದು |
ಜಡಜಾಕ್ಷನಂ ನೋಡಿ ಸುರನದೀನಂದನಂ ನಸುನಗುತಲಿಂತೆಂದನು || 1 || 230 ||

**ಮಾರವಿ - ಏಕ**
ಯಾದವಪತಿ ನೀನಿಂದು | ನಾವು |
ಪೋದಲ್ಲಿದಿರ್ದೈತಂದು ||
ಊದಿಗೆ ಭೀಮಾರ್ಜುನರು | ಕುಟಿ |
ಲೋದಯಕೆಣೆ ನಿನಗ್ಯಾರು || 1 ||
ವಲಿಯದಬಲೆಯನು ಛಲದಿ | ಬಲು |
ಬಲಗೂಡುತ ಸಂಗರದಿ ||
ಗೆಲಿದೊಯ್ದಪೆನೆಂದೆನುತ | ಬರೆ |
ಸಿಲುಕುವುದೇನು ನಿರರ್ಥ || 2 ||
ಅವರವರವಗುಣಗಳನು | ಮ |
ತ್ತವರವರರಿಯರು ನೀನು ||
ತವೆ ವೈದರ್ಭಿಯ ಕದ್ದು | ತಂ |
ದವ ನೀ ನುಡಿ ಕೆಲಸಾರ್ದು || 3 ||
ಪಡದವಗೆಣೆ ಪಂಚಜನ | ಯೆಂದು |
ನುಡಿವುದರಿಯೆ ಶ್ರುತಿವಚನ ||
ತಡದು ಗುರುವ ಮಾರಾಂತ | ಬಾ |
ಯ್ಬಡಿಕನೆ ನುಡಿಯದಿಭ್ರಾಂತ || 4 ||
ಮಾವನ ಮಡುಹುವ ಧರ್ಮಾ | ಯಿಂ |
ನ್ಯಾವ ಶ್ರುತಿಯೊಳಾ ಕರ್ಮ ||
ನಾವರಿಯೆವು ಶಾಸ್ತ್ರವನು | ನುಡಿ |
ದಾವ ಸಫಲ ಲೆಕ್ಕಿಸೆನು || 5 || 235 ||

**ಶಂಕರಾಭರಣ - ಮಟ್ಟೆ**
ಎಲೆಲೆ ಭೀಷ್ಮ ನೆನೆದು ಬಂದ |
ಕೆಲಸವೇನು ಬಂದೆ ಹೊತ್ತು |
ಗಳೆಯಲ್ಯಾಕೊ ಕೊಳುಗುಳದಲಿ | ಗೆಲಿದು ತರುಣಿಯ ||
ತಳುವದೊಯ್ದು ಕುರುಕುಲೇಶ |
ಗೊಲಿದು ಮದುವೆ ಮಾಡಿಸೆನುತ |
ಘಳಿಲನೆಚ್ಚ ನೂರು ಬಾಣ | ಸೆಳದು ರೋಷದಿ || 1 ||
ಬರುವ ಕೋಲ್ಗಳನ್ನು ನಡುವೆ |
ತರಿದು ದಿವ್ಯ ಬಾಣಗಳನು |
ಸುರಿಯೆ ಕಡಿದು ಫಡಯೆನುತ್ತ | ಹರಿಯು ಸತ್ವದಿ ||
ಮರಳಿ ಮೋಹನಾಸ್ತ್ರವೆಸೆಯೆ |
ಧುರದಿ ಭೀಷ್ಮ ನಿದ್ರೆಯಿಂದ |
ಲೊರಗಲಿತ್ತ ದ್ರೋಣಗೆಂದ | ನರನು ಕನಲುತ || 2 ||
ಧಾತ್ರಿಯಮರರೈಸೆ ನೀವು |
ಧೂರ್ತ ಕೌರವನನು ಸೇರಿ |
ವ್ಯರ್ಥ ಲೋಹಶಿಖಿಯವೋಲ್ಕಿ | ರರ್ಥ ತಿಳಿಯದೆ ||
ಕೀರ್ತಿನಾಶ ಧುರದಿ ಬೇ |
ಸತ್ತು ಪೆಟ್ಟತಿಂಬುದ್ಯಾವ |
ಸ್ವಾರ್ಥ ತನ್ನೊಳಳಪಿ ಸಲ್ಲ | ನಿತ್ತು ನೋಳ್ಪುದು || 3 ||

ಮೂರ್ಜಗದಲಿ ವಿಜಯನೆನಿಸಿ |
ಧೂರ್ಜಟೀ ಮುರಾರಿಯೊಡನೆ |
ಊರ್ಜಿತದಲಿ ಸೆಣಸಿದಧಟಿ | ನರ್ಜುನ ಮಹೋ ||
ನಿರ್ಜರೇಂದ್ರುತನಯನ್ನೈಸೆ |
ಲಾರ್ಜನಾಂಗದೊಳಗೆ ಧುರದಿ |
ದುರ್ಜನತ್ವ ನಿನಗೆ ನಮ್ಮೊ | ಳಾರ್ಜಿಸಿಹುದಲ || 4 ||
ಪಂಡಿತತ್ವ ಶರದಿ ಕಂಡು |
ಕೊಂಡು ಧುಮುಕಲೇತಕಿತರ |
ರಂಡಲದು ಸೇರದಿಹರೆ | ಗಂಡುಸಾದರೆ ||
ಭಂಡತನದಿ ಪರರೊಳುಂಡು |
ಕೊಂಡು ಕಾಡೊಳುದಿಸಿ ಬೆಳೆದ |
ಮಂಡುಕದ ಸಮಾನನೆನಲು | ಕೆಂಡ ಸೂಸುತ || 5 || 240 ||

**ಭೈರವಿ - ಅಷ್ಟ**
ಮಡಕೆಯ ಹೊಡೆಯುವರೆ | ಯಾವುದಕೆ ದೊ |
ಡ್ಡಡಿಕೆಯ ಮರವು ಬೇರೆ ||
ತಡದುಕೊಳ್ಳೆಂದು ಕಂ | ಗಿಡಿಯುಗುಳುವ ಬಾಣ |
ಗಡಣವ ಕವಿಸಿದನು || 1 ||
ಹೊದ್ದಿದಂಬುಗಳನೆಲ್ಲ | ಖಂಡಿಸಿ ಪೇಳ್ದ |
ನುದ್ದೇರಿ ಬೆಳೆಯೆಂಬಲ್ಲ ||
ಮದ್ದಳೆಯಹುದೆ ಪ್ರಸಿದ್ಧದಿ ತೋರ್ಪೆನೆಂ |
ದುದ್ರೇಕದಿಂದೆಚ್ಚನು || 2 ||
ಕಡಿವನಿತರೊಳು ನೋಡಿ | ಮುಹುರ್ಮುಹು |
ಬಿಡಲುಗ್ರ ಬಾಣ ಹೂಡಿ ||
ಕೊಡನಾತ್ಮಜನ ಕಾಯ | ದೊಡನೆ ನೆಟ್ಟವು ಬಾಣ |
ತಡೆಯದೆ ನರನೆಂದನು || 3 || 243 ||

**ಕಾಂಬೋಧಿ - ಝಂಪೆ**
ನಿಲ್ಲು ನಿಲ್ಲೆಲವೊ ಪಾರ್ಥ | ನೀನೆನ್ನ |
ಕೊಲ್ಲುವೆಯೊ ಮುನಿದು ವ್ಯರ್ಥ ||
ಬಿಲ್ಲುವಿದ್ಯವನು ನಿನಗೆ | ಕಲಿಸಿದುದ |
ನೆಲ್ಲ ಮರತಿಹರೆ ಹೀಗೆ || 1 ||
ದಾಕ್ಷಿಣ್ಯ ದಯವಿಲ್ಲದೆ | ಯೇನಿಂದು |
ರಾಕ್ಷಸರ ತೆರನದಾದೆ ||
ಭಕ್ಷಿಸೆನ್ನುವನು ನೀನು | ನೋಡು ಮ್ಯೆ |
ಯಕ್ಷಿಗಳು ಕಾಣದೇನು || 2 ||
ನುಡಲಿ ಕೌರವನನೆಂದು | ದ್ರೋಣ ಕಂ |
ಗೆಡುತುಸುರೆ ಕೇಳುತಂದು ||
ಒಡನೆ ಕಲಿಪಾರ್ಥ ಬಂದು | ಆದರಿಸೆ |
ಪಿಡಿದು ತಡವರಿಸುತಂದು || 3 || 246 ||

**ವಾರ್ಧಕ**
ಪ್ರಾರಬ್ಧವಿದು ನಿಮ್ಮದಾರಾರಿಗೋಸುಗ ವಿ |
ಚಾರವಿಲ್ಲದೆ ಬಂದು ನೊಂದಿರಳವಿಯೊಳಗಿ |
ನ್ನಾರ್‍ಯೆಕೆವಡಿಸುವರ ಕಾಣೆನಶ್ವತ್ಥಾಮನಾವೆಡೆಯೊಳಲಸಿರ್ಪನೊ ||
ಸಾರಿ ವಿಶ್ರಮಿಸಿರೆಂದಾದರಿಸಿ ಕೈವಿಡಿದು |
ವೀರ ತಿರುಗಲ್ಕಿತ್ತ ವಿದುರನೊಳು ಕಾಳಗದಿ |
ಮಾರುತಿಯು ನುಡಿದನೆಲೆ ದೂತಿಮಗ ನಿನಗೇಕೆ ಕಲಹವೆಂದೆನಲೆಂದನು || 1 || 247 ||

**ಮಾರವಿ - ಏಕ**
ಮಾನುಷಜನ್ಮದಿ ಕಾಣಲು ಜನಿಸಿದ |
ಕೋಣನೆ ನಿನಗಂಜಿ ||
ಯೇನೆಂದುಸುರಿದೆ ತ್ರಾಣದ ಹೆಮ್ಮೆಯ |
ಮಾಣಿಪೆನಿದಿರಾಗು || 1 ||
ಕುರುಪತಿಯಲ್ಲಿರುತಿರುವ ಧಾನ್ಯಂಗಳ |
ಪರಿಕರದಿಂ ತಿಂಬ ||
ಕುರಿಗಳು ನಿನ್ನ ವೋಲಿರುವ ನೊರಜುಗಳ |
ಪರಿಗಣನೆಯದಿಲ್ಲ || 2 ||

ಊರೊಳಗೆಲ್ಲ ವಿಚಾರಿಸಿ ಭಿಕ್ಷದಿ |
ವಾರಂತೆ ತಿರಿದುಂಡು ||
ಘೋರಾರಣ್ಯವ ಸೇರಿ ಜೀವಿಸುವನ |
ಪೌರುಷ ಸುಡಲೆಂದ || 3 ||
ಯೆನೆ ಮಾರುತಿ ನಿಲ್ಲೆನುತಲೆ ಗದೆಯಿಂ |
ದನಿಮಿಷರೀಕ್ಷಿಸಲು ||
ಘನತರ ಸತ್ವದೊಳಣಕಿಸಿ ಹೊಯ್ಯಲು |
ಗಣಿಸದೆ ತಡೆಯಲ್ಕೆ || 4 ||
ಮರಳಿ ಮುಷ್ಟಿಯ ಬಲಿದೆರಗಲು ವಿದುರನು |
ತರಹರಿಸುತ ಬಳಲಿ ||
ಧುರದಲಿ ಮೂರ್ಛೆಯೊಳೊರಗಲು ಲಾಲಿಸು |
ಧರಣಿಪ ಮುಂಗಥೆಯ || 5 || 252 ||

**ಭಾಮಿನಿ**
ಹಿಂದೆ ನರಕಾಸುರನಿಗೌರಸ |
ನಂದನೆಯು ಧೃತಕೇಶಿಯೆಂಬಳು |
ಬಂದು ದೂರ್ವಾಸನನು ಪೀಡಿಸುತಿರಲು ಕಡು ಮುನಿದು ||
ಮಂದಮತಿ ನೀ ದುಷ್ಟದಾನವಿ |
ಯಂದವಾಗೆಂದೆನುತ ಶಪಿಸಲು |
ಅಂದು ಮೊದಲರುಣಾದ್ರಿಯೊಳು ಭೀಷಣೆಯಳೆಂದಿರಲು || 1 || 253 ||

**ಕೇದಾರಗೌಳ - ಅಷ್ಟ**
ಆ ದನುಜೆಯು ನಿದ್ರೆಗೈದೆದ್ದು ತನಗಾಗ |
ಳಾದ ಸ್ವಪ್ನದ ಪರಿಯ ||
ಕ್ರೋಧದಿ ನೆನನೆನದ್ಯೆದೆ ತಾನಾರ್ಭಟೆ |
ಗೈದು ತನ್ನೊಳಗೆಂದಳು || 1 ||
ಮಾನವೇಂದ್ರರ ಬಲು ಸೈನಿಕ ಹೈಹಯಾ |
ದಾನಗರದಿ ಬಂದೀಗ ||
ಚಾನಾಹಾನಿಯ ಮಾಳ್ಪರಾನಲಾಪರೆ ಬಂದು |
ದಾನವವೈರಿ ಸಹ || 2 ||
ತಂದೆಯ ಕೊಂದ ಮದಾಂಧ ಗೊಲ್ಲರ ಮನೆ |
ಯಿಂದ ಪಾಲ್ಬೆಣ್ಣೆ ಕದ್ದು ||
ತಿಂದವ ಸಹವಾಗಿ ಬಂದಿಹವೈರವನಿ |
ನ್ನಿಂದು ಸಾಧಿಸಬಹುದು || 3 ||
ಈ ರೀತಿಯಲಿ ಸಂದ ಪೂರ್ವಜರೈತಂದು |
ಕಾರುಣ್ಯದಿಂದೆನ್ನೊಳು ||
ವಾರಂತೆ ನುಡಿದರೆಂದೀ ರಾತ್ರಿ ಕನಸಿಲಿ |
ತೋರಿತ್ತು ಲೇಸು ಮುಂದೆ || 4 ||
ನೋಡುವೆನಿದರನೆಂದಾಡುತ್ತಲಸುರೆಯು |
ರೂಢಿ ಕಂಪಿಸುವಂದದಿ ||
ಕೂಡೆ ತಾನೈತಂದಳ್ಪಾಡೆಯ ಕಡಿವುತ್ತ |
ಲಾಡಲೇನದ್ಭುತವ || 5 || 258 ||

**ವಾರ್ಧಕ**
ಲೋಕ ಮೂರಡಸಿ ನುಂಗುವ ಮೃತ್ಯುವೋ ಕಲ್ಪ |
ದಾಕಪರ್ದಿಯ ನಯನ ಜ್ವಾಲೆಯೋ ಮೇರುಗಿರಿ |
ಈ ಕಮಲಜಾಂಡವನಡರ್ದುದೋ ರಕ್ಕಸಿಯ ಹೆಜ್ಜೆಗವನೀತಳಕ್ಕೆ ||
ನಾಕವೇ ಜರಿದುರುಳ್ವುದೋ ಜಲಧಿಗಳ್ಮಸಗಿ |
ಯೇಕಮಯವಾಯ್ತೊಯೆನೆ ದಿವಿಜರಳುಕುತ್ತಿರಲು |
ಭೀಕರಾಂಗದ ದನುಜೆ ವಿಲಯಭೈರವಿಯಂತೆ ಬಂದು ಫಲುಗುಣಗೆಂದಳು || 1 || 259 ||

**ಸಾವೇರಿ - ಅಷ್ಟ**
ಏನೆಲಾ ನರನೇ | ನಿನ್ನಯ ಪೆಸ |
ರೇನೆಲಾ ನರನೇ ||
ಯೇನೆಲವೊ ನಿನ್ನೆಲುವ ಮುರಿದೆಳ |
ದಾ ನೊರೆಯ ಬಿಸಿ ರಕ್ತ ಮಾಂಸವ |
ನೀ ನಿಮಿಷದಲಿ ತಿಂಬೆ ಬಿಡಿಸುವ |
ತ್ರಾಣವಿರ್ಪನ ಕಾಣೆಸೊಮ್ಮಿಗೆ || ಏನೆಲಾ || 1 ||

ಗೊಲ್ಲರ ಮನೆಯ ಪೊಕ್ಕು | ಪಾಲ್ಬೆಣ್ಣೆ ಕ |
ದ್ದಲ್ಲಿ ತಿಂದವನ ಸೊಕ್ಕು ||
ನಿಲ್ಲಿಸುವೆನಾತನನು ನೀ ದಿಟ |
ಬಲ್ಲೆಯಾದರೆ ನಿನ್ನ ನಾ ನಿಂ |
ದಿಲ್ಲಿ ಬಿಟ್ಟಪೆ ಜೀವಮಾತ್ರವ |
ದಲ್ಲದಿರ್ದಡೆ ಕೊಲ್ವೆ ಕಾಣೆಸು || ಏನೆಲಾ || 2 ||
ಈ ಸೇನೆ ಯೆಲ್ಲವನೂ | ಮುಷ್ಟಿಯೊಳೌಕಿ |
ತೋಷದಿ ತಿಂಬೆ ನಾನು ||
ಸೂಸುವ ಜಲಧಿಯಾ |
ಪೋಶನೆಗೊಂಬೆ ನಾ |
ವಾಸವಾದ್ಯರು ಪಾಡೆ |
ಈಶನೆ ತಡೆಯಲಿ || ಏನೆಲಾ || 3 || 262 ||

**ಭೈರವಿ - ಏಕ**
ಕಲ್ಪದ ಸಿಡಿಲಂದದಲಿ | ಭುಜ |
ಬಲ್ಪಿಲಿ ಹೊಯ್ವುತ ಕನಲಿ ||
ದರ್ಪದಿ ಸೈನ್ಯದ ಪೊಗಲು | ತುಟಿ |
ಚಪ್ಪರಿಸುತಳಂದಿನೊಳು || 1 ||
ಕಂಡ ಕಡೆಗೆ ಬಲ ನಿಲದೆ | ಭಯ |
ಗೊಂಡು ಸರಿಯೆ ನಡೆಗೆಡದೆ ||
ಪುಂಡರಿಕಾಕ್ಷನ ಮತದಿ | ಆ |
ಖಂಡಲಸುತ ದೃಢ ಮನದಿ || 2 ||
ಮಾರುತಿಯನು ಧ್ಯಾನಿಸಲು | ಮಹ |
ಮೇರುಸನ್ನಿಭಕಾಯದೊಳು ||
ಮೂರು ಜಗವು ಕಂಪಿಸಲು | ಮೈ |
ದೋರಿದ ಹನುಮನಂದಿನೊಳು || 3 || 265 ||

**ಭಾಮಿನಿ**
ಕಂಡು ಹರಿಪದಪದ್ಮದಲಿ ನಿಜ |
ಮಂಡೆಯನು ಚಾಚುತ್ತ ನಿಂದಿರೆ |
ಪುಂಡರೀಕಾಂಬಕನು ಮನ್ನಿಸಿ ನುಡಿದ ಮರುತಜಗೆ ||
ದಿಂಡೆ ದಾನವಿ ನಮ್ಮ ಸೈನ್ಯವ |
ಗಂಡುಗೆಡಿಸುವಳೀಕ್ಷಿಸೆನೆ ಖತಿ |
ಗೊಂಡು ನೇಮವನಾಂತು ತಡದಿಂತೆಂದನಸುರೆಯೊಳು || 1 || 266 ||

**ಶಂಕರಾಭರಣ - ಮಟ್ಟೆ**
ದುರುಳೆ ದಿಂಡೆ ಮರಳು ದೊಂಡೆ |
ಗರುಳನುಗಿವೆ ಕೊರಳ ಮುರಿವೆ |
ಭರದಿ ಮೀರ್ದೆ ಗರುವ ತೋರ್ದೆ | ಯರಿಯೆ ತೊಲಗೆಲೆ ||
ಧುರದಿ ಸಾಯಬೇಡ ನ್ಯಾಯ |
ವರಿಯೆ ಹಿಂದೆ ಸರಿಯೆ ಮುಂದೆ |
ಹರಣ ವುಳಿವುದೆನಲು ಕೇಳಿ | ಭರದಿ ನುಡಿದಳು || 1 || 267 ||

**ಕಾಂಬೋಧಿ - ಝಂಪೆ**
ತೊಲಗು ತೊಲಗೆಲೆ ಮಂಗ ತಲೆಗೇರ್ದ ಮದ್ಯವನು |
ಘಳಿಗೆಯೊಳಗಿಳಿಸಿಬಿಟ್ಟಪೆನು ||
ಬಲು ಬಾಲವನು ಪಿಡಿದು ನೆಲಕಪ್ಪಳಿಸುವೆನೆನೆ |
ಹಲು ಮೊರದು ಹನುಮನಿಂತೆಂದ || 1 || 268 ||

**ಶಂಕರಾಭರಣ - ಮಟ್ಟೆ**
ಲಂಕೆಯೊಳಗೆ ನಿನ್ನವೋಲು |
ಲಂಕಿಣಿಯಳು ಮೊದಲು ಬಹಳ |
ಲಂಕರಿಸಲಹಂಕೃತಿಯನು | ಬೆಂಕಿಯಿಂದಲಿ ||
ಸಂಕುಲವನು ಸುಟ್ಟುದರಿಯ |
ಲಂಕುರಿಸಿದ ನಿನ್ನ ಪಾಡೆ |
ಬಿಂಕ ಮುರಿವೆನೆನಲು ಕೇಳು | ತಂ ಕರಾಳಿಯು || 1 || 269 ||

**ಕಾಂಬೋಧಿ - ಝಂಪೆ**
ಮಾನುಷರ ಕಿಂಕರನೆ ದಾನವರ ಬಲುಹರಿಯೆ |
ಕಾನನದಿ ಮರದಿಂದ ಮರಕೆ ||
ಯೇನೆಲವೊ ಲಂಘಿಸುವ ಪ್ರಾಣಿ ತನ್ನೊಳು ನಿನ್ನ |
ತ್ರಾಣ ಸಾಲದು ಸಾರ್ದೆನೆನಲು || 1 || 270 ||

**ಶಂಕರಾಭರಣ - ಮಟ್ಟೆ**
ಬಗುಳದಿರು ಬಜಾರಿ ನಿನ್ನ |
ಹೊಗಿಸದಿರೆನು ಯಮನ ಪುರವ |
ಮಿಗುವರಿದರೆ ಮಾತಮೀರಿ | ತೆಗಿವೆ ಕರುಳನು ||
ಮೃಗಗಳನ್ನು ಬಡಿದು ತಿಂದ |
ಸೊಗಸು ಬಾರದಿಲ್ಲಿಗೆನಲು |
ಭುಗಿಲೆನುತ್ತ ದುಷ್ಟ ದನುಜೆ | ವಿಗಡತನದಲಿ || 1 || 271 ||

**ಕಾಂಬೋಧಿ - ಝಂಪೆ**
ಲೋಕವೆಲ್ಲವ ತಿಂಬೆ ನಾಕಪಾಲರ ಕಾಂಬೆ |
ನಾ ಕಪರ್ದಿಯೆ ತಡೆಯಲಿದಿರು ||
ಭೀಕರಿಪೆನೆಂದೆನುತಲಾ ಕುಮತಿ ಮುಷ್ಟಿಯಿಂ |
ದೌಕಿ ಹನುಮನನೆರಗೆ ಮುನಿದು || 272 ||

**ಭಾಮಿನಿ**
ವಜ್ರಮುಷ್ಟಿಯ ಬಲಿದು ಕೇಸರಿ |
ಘರ್ಜನೆಯೊಳಂದಾಂಜನೇಯನು |
ನಿರ್ಜರರು ಪೊಗಳಲ್ಕೆ ಹೊಯ್ದನು ದನುಜೆ ಮಸ್ತಕವ ||
ಊರ್ಜಿತದ ಘಾಯದಲಿ ಶಾಪವಿ |
ಸರ್ಜನೆಯದಾಗಲ್ಕೆ ವಂದಿಸಿ |
ಮೂರ್ಜಗತ್ಪ್ರಾಣಜನ ನುಡಿಸಿದಳಧಿಕ ಭಕ್ತಿಯಲಿ || 1 || 273 ||

**ಪಂಚಾಗತಿ - ಧ್ರುವ**
ಜಯ ಜಯ ಜಗತ್ಪ್ರಾಣಜಾತ ವಿಖ್ಯಾತ |
ಭಯ ವಿನಿರ್ಜಿತ ಸುಜನಪ್ರೀತ ನಿರ್ಧೂತ || 1 ||
ನರಕಾಸುರಂಗುರಗಕನ್ನೆಯೊಳು ಜನಿಸಿ |
ಯಿರಲು ಯತಿ ಶಾಪದಿಂ ದುರುಳ ತನು ವಹಿಸಿ || 2 ||
ನಿನ್ನ ಸಂದರ್ಶನದಿ ಮುನ್ನಿನಂತಾದೆ |
ಇನ್ನು ಕರುಣಿಸು ನೇಮವನ್ನು ಕೋಪಿಸದೆ || 3 || 276 ||

**ಭಾಮಿನಿ**
ಎಂದು ಚರಣದೊಳೆರಗಿದಬಲೆಯ |
ನಂದು ಪರಸುತ ಕಳುಹಲಾಕೆಯು |
ವಂದಿಸುತ ಬಂದುರಗಲೋಕವ ಸಾರ್ದು ಸುಖವಿರಲು ||
ಗಂಧವಾಹಕುಮಾರ ಶ್ರೀಗೋ |
ವಿಂದನನುಮತಗೊಂಡು ಮರಳಲು |
ಮುಂದಣ ಕಥಾ ಕೌತುಕವ ಜನನಾಥ ಕೇಳೆಂದ || 1 || 277 ||

**ಸೌರಾಷ್ಟ್ರ - ತ್ರಿವುಡೆ**
ಧಾರುಣಿಪ ಕೇಳಿತ್ತ ಮುನಿಪತಿ |
ನಾರದನು ಸುರ ನಗರದಿಂದಲಿ |
ನೀರದಾಧ್ವದೊಳಿಳಿದು ಬರುತಿರೆ | ದೂರದಿಂದ || 1 ||
ಪರಿಕಿಸುತಲಿ ಬಲವ ತನ್ನೊಳು |
ದುರುಳೆ ತಮನನ್ವಯದಿ ಜನಿಸಿರು |
ತಿರುವ ಕುಂಜರಖಳನ ತೀರ್ಚಲು | ದೊರಕಿತೆನುತ || 2 ||
ಮನದಿ ನಿಶ್ಚಯಗೈದು ನಾರದ |
ಮುನಿಯು ತುಹಿನಾಚಲದಿ ನೆಲಸಿಹ |
ದನುಜನೆಡೆಗೈತಂದನಾಕ್ಷಣ | ವಿನಯದಿಂದ || 3 ||
ಮೌನಿ ಬಿಜಯಂಗೈದ ವಾರ್ತೆಯ |
ದಾನವೇಶ್ವರ ಕೇಳಿ ಬಲು ಸು |
ಮ್ಮಾನದಿಂ ಕರತಂದು ಮಣಿದು ನಿ | ಧಾನದಿಂದ || 4 ||

ಧನ್ಯನಾದೆ ಕೃತಾರ್ಥನಾದೆನು |
ತನ್ನೊಳಾಗುವ ಸೇವೆ ಯಾವುದು |
ಮುನ್ನ ಪೊಸವಾರ್ತೆಗಳ ಬೆಸಸುವು | ದೆನ್ನಲೆಂದ || 5 || 282 ||

**ಸೌರಾಷ್ಟ್ರ - ಆದಿ**
ಕೇಳು ಖಳಕುಲಪಾಲಕನೆ ಮುದದೀ | ಈ ನಿನ್ನ ಭುಜಬಲ |
ದೇಳಿಗೆಗೆ ಸರಿಯಾರು ಮೂಜಗದಿ ||
ಕೇಳಿ ಸಂತಸ ತಾಳಿದೆನು ದಿಗು |
ಪಾಲ ಮುಖ್ಯರ ಮೌಳಿ ನಿನ್ನಯ |
ಕಾಲಿಗೆರಗುವ ವೋಲು ತೋರ್ಪ ವಿ |
ಶಾಲಭಾಗ್ಯ ಸುಶೀಲ ಗುಣನಿಧಿ || ಕೇಳು ಖಳ || 1 ||
ಚಿತ್ರವಿಸು ದೈತ್ಯೋತ್ತಮನೆ ನುಡಿಯ | ಪೊಸತಾಗಿ ನಡದಿಹ |
ವಾರ್ತೆಯನು ಮನವಿತ್ತು ಖಳರಾಯ ||
ದೈತ್ಯತಮ ಮೊದಲಾಗಿ ನಿನ್ನ ಕು |
ಲೋತ್ತಮರ ಕೆಡಹುತ್ತ ಮಡುಹಿದ |
ಧೂರ್ತರಿಂದೀ ಹೊತ್ತು ವಂದಾ |
ಗುತ್ತ ಬಂದಿಹರಿತ್ತ ಗರ್ವದಿ || ಕೇಳು ಖಳ || 2 ||
ನರ ಮುರಾಂತಕ ಮರುತನಂದನರು | ಒಂದಲ್ಪ ಕೆಲಸದಿ |
ತರುಣಿಯೋರ್ವಳ ಕುರಿತು ಸಾಧಿಪರು ||
ಕುರುಪತಿಯೊಳಳವಿಯನು ಕೊಡುವರು |
ಧುರದಿ ನೀನವರುಗಳ ತೀರ್ಚಲು |
ಪಿರಿಯರಿಗೆ ಸಂತೋಷ ರಣ ಜಯ |
ಸಿರಿಯು ಕೌರವ ದೊರೆಗೆ ಲಾಲಿಸು || ಕೇಳು || 3 || 285 ||

**ಭಾಮಿನಿ**
ಮುಂದಹದ ನೀನೊಲಿದು ಮನಸಿಗೆ |
ಬಂದ ತೆರನೆಸಗೆನುತ ಹರಿ ಗೋ |
ವಿಂದ ಶರಣೆನುತಮರಮುನಿ ತೆರಳಲ್ಕೆ ಖಳಪತಿಯು ||
ಸಂದ ಹಗೆಯನು ಸಾಧಿಸುವೆ ತಾ |
ನೆಂದು ವೀರಾವೇಶದಲಿ ಖಳ |
ಸಂದಣಿಯು ಸಹಿತೈದಿ ತಡದಿಂತೆಂದ ಮರುತಜಗೆ || 1 || 286 ||

**ಭೈರವಿ - ಏಕ**
ಮಾರುತಿ ಯೆಂಬವನ್ಯಾರೊ | ಮುರ |
ವೈರಿ ವಿಜಯರನು ತೋರೊ ||
ಕಾರ್ಯವಿಲ್ಲದೆ ಧುರ ಬೇಕೆ | ಕಿ |
ಮ್ಮೀರನ ಮಡುಹಿದುದ್ಯಾಕೆ || 1 ||
ನರಮಾಧವರೈತಹರು | ಕಲಿ |
ಮರುತಜ ಬೇರಿನ್ಯಾರು ||
ದುರುಳ ಖಳರ ಮಡುಹುವುದು | ನಮ್ಮ |
ಬಿರಿದೇನ್ ನೀ ಮಾಡುವುದು || 2 ||
ಬಕನನು ಸುಮ್ಮನೆ ಕೊಂದ | ಮದ |
ಮುಖ ನಿನ್ನಯ ಬಾಯಿಂದ ||
ಸಖನನು ಸೀಳಿದು ತೆಗವೆ | ಸ |
ನ್ಮುಖನಾಗಧಟೀಕ್ಷಿಸುವೆ || 3 ||
ಭಂಡನೆ ಗಳುಹುವುದೇನು | ನಿನ್ನ |
ದೊಂಡೆಗರುಳನುಗಿಸುವೆನು ||
ಕಂಡವರೆಂದುದ ಕೇಳಿ | ಹಾಯ್ |
ದಂಡಲವೆಯ ಘಡ ಧೂಳಿ || 4 ||
ಆದರಿದಿರು ನಿಲು ನಿನ್ನಾ | ಶೌ |
ಯೋರ್ದಯ ನೋಡುವೆನೆನ್ನ ||
ಕಾದಂಬಿನ ಸವಿ ತಾಳು | ಯೆಂದು |
ಸೇದಿ ಬಿಡಲು ಬಾಣಗಳು || 5 || 291 ||

**ಶಂಕರಾಭರಣ - ಮಟ್ಟೆ**
ಬರುವ ಬಾಣಗಳನು ನಡುವೆ ತರಿದು ಭೀಮನು |
ಭರಿತ ರೋಷದಿಂದ ಸುರಿದ ಸರಳ ಮಳೆಯನು ||
ದುರುಳನದನು ಕಡಿದು ಮರಳಿ ಮರಳಿ ಹೂಡಲು |
ಮರುತಜಾತನಂಗದೊಳಗೆ ಸರಳು ನಾಟಲು || 1 ||
ಅರಿತು ಹರಿಯು ನರನೊಳೆಂದ ಧುರದಿ ಖಳನೊಳು |
ಮರುತಜಾತ ನೊಂದನೈಸೆ ಮರಳು ಕ್ಷಣದೊಳು ||
ಪರಿಕಿಸೆನಲು ನರನು ಕೇಳಿ ಮರುತವೇಗದಿ |
ಸರಳ ಸುರಿವುತಡ್ಡಗಟ್ಟಿ ಧುರದ ಮಧ್ಯದಿ || 2 ||
ಮಾರುತಿಯನು ಹಿಂದೆ ನಿಲಿಸಿ ಬಾರೆನುತ್ತಲಿ |
ಕ್ರೂರ ಖಳನೊಳೆಂದ ಶೌರ್ಯ ತೋರೆನುತ್ತಲಿ ||
ದಾರಿಪೋಪ ಮೃತ್ಯುಗಾಹಾರವಾದೆಲ |
ಸಾರೆಲೇಸು ಸಲ್ಲದಿರಲು ತೋರು ಭುಜಬಲ || 3 ||
ಸೋತು ಹೆಮ್ಮೆಯಳಿದವಗೆ ಪುನೀತ ನೀನೆಲ |
ಮಾತಿಗಲಸಿ ಬಿಡುವೆನೆ ವಿಖ್ಯಾತನಾರೆಲ ||
ಈತತೂಕ್ಷಣದಲಿ ಕಳುಹು ಜಾತಿಕೋಲ್ಗಳ |
ಭೀತಿಯಿರಲು ಮಣಿದು ಬೇಡಿ ಸೋತು ಬದುಕೆಲ || 4 ||
ಅಣ್ಣನಾದ ಭೀಮಸೇನನನ್ನು ಧುರದೊಳು |
ಮುನ್ನ ಬಳಲಿಸಿರ್ದ ಬಲುಹನಿನ್ನು ಭರದೊಳು ||
ಯೆನ್ನೊಳಿಲ್ಲ ತೋರೆನುತ್ತ ಸ್ವರ್ಣಪುಂಖದ |
ಕರ್ಣಪೂರದಸ್ತ್ರಚಯಗಳನ್ನು ಕವಿಸಿದ || 5 ||
ದನುಜನನಿತು ಬಾಣಗಳನು ಹಣಿದು ರೋಷದಿ |
ಯೆಣಿಕೆಯಿಲ್ಲದಸ್ತ್ರ ಬಿಡಲು ಕ್ಷಣ ಮುಹೂರ್ತದಿ ||
ಮುನಿದು ಪಾರ್ಥನುಗ್ರ ತರದ ಕಣೆಗಳಿಂದಲಿ |
ರಣದಿ ಬಳಲಿಸಲ್ಕೆ ಖಳನು ಜುಣುಗಿ ಖತಿಯಲಿ || 6 || 297 ||

**ಕೇದಾರಗೌಳ - ಝಂಪೆ**
ಮಾಯಕವ ಸೃಷ್ಟಿಸುತ್ತ | ದುರುಳನು ವಿ |
ಹಾಯಸವನಡರಿ ಮತ್ತ ||
ಕಾಯವಡಗಿಸಿ ಗಜರುತ | ಸಿಡಿಲಂತೆ |
ಬಾಯಪ್ಪಳಿಸಿ ಜೈವುತ || 1 ||
ಕಾರ್ಗತ್ತಲೆಯ ಕವಿಸುತ | ತರು ಗುಂಡು |
ಕಲ್ಗಳನು ಮಳೆಗರವುತ ||
ಘೋರ್ಗರದು ಬಹುರೂಪನು | ಕಾಣಿಸಿದ |
ನಾರ್ಗೆ ಬಣ್ಣಿಸುವುದದನು || 2 ||
ದುಷ್ಟನಧಟಿಗೆ ಭಯದೊಳು | ಸೇನೆ ಕಂ |
ಗೆಟ್ಟು ಹಿಂದಕೆ ಸರಿಯಲು ||
ದಿಟ್ಟ ನರನಭಯಗೊಡುತ | ರಕ್ಷೋಘ್ನ |
ಶ್ರೇಷ್ಠ ಮಂತ್ರವ ಜಪಿಸುತ || 3 || 300 ||

**ವಾರ್ಧಕ**
ಹೂಡಿಬಿಡೆ ಖಳಮಾಯೆ ಬಯಲಾಯ್ತು ದನುಜನಂ |
ನೋಡಿ ನುಡಿದಂ ನಿನ್ನ ಹರಣಕಿದೆ ತಾಳೆಂದು |
ಗೂಢಮಂತ್ರದಿ ಜಪಿಸಿ ಪಾಶುಪತಬಾಣವಂ ಬಿಡೆ ಭುವನ ಕಂಪಿಸಲ್ಕೆ ||
ಮೂಡಿ ಮುಸುಕುವ ಕಾರ್ಬೊಗೆಯಲಿ ಪೇರ್ಗಿಡಿಗಳಿಂ |
ದೀಡಿರಿದು ಸಂಹಾರಬೀಜವಂ ಸಿದ್ಧಿಸುತ |
ಕೂಡೆ ಬಂದಸುರನ ಕಠೋರ ವಕ್ಷಸ್ಥಳವ ಬಗಿದು ವಿತಳಕೆ ಸಾರ್ದುದು || 1 || 301 ||

**ಕೇದಾರಗೌಳ - ಅಷ್ಟ**
ಇತ್ತಲೀತೆರನಾಗಲತ್ತ ಮಾರುತಿ ರೋಷ |
ವೆತ್ತು ಕೌರವಸೇನೆಯ ||
ಸತ್ವದಿಂದಲಿ ಸದವುತ್ತ ಕಾಲನ ಪುರ |
ಕೆತ್ತಿಸುತ್ತಿರಲು ನೋಡಿ || 1 ||
ಧನುವ ಝೇಂಕರಿಸಿ ಮಾರ್ಗಣವ ಹೂಡುತ ಗಂಗಾ |
ತನುಜ ಭೀಮನಿಗೆಂದನು ||
ಗಣಿಸದೆ ನೀ ನಮಗಿದಿರೆ ನಿಲ್ಲದಿರಾಗಿ |
ಜುಣುಗದೆಂದೆನಲೆಂದನು || 2 ||

ಸಂಗದೋಷವು ನಿಮ್ಮ ಭಂಗಿಸಿದುದು ವ್ಯರ್ಥ |
ವಂಘೈಸಲೇನಾಹುದು ||
ಸಿಂಗಿಯಂತಿಹ ಕುರುಪುಂಗವನೊಡನೆ ಪಾ |
ಲಂಗವ ಕೆಡಿಸಿದಿರಿ || 3 ||
ವನದೊಳು ಫಲ ಮೂಲವನು ತಿಂದು ಜೀವಿಪು |
ದನು ನೋಡಿ ಕ್ಲೇಶಗೊಂಡು ||
ಜನಪ ಕೌರವಗೆ ಬೋಧನೆಗೊಟ್ಟು ಕರಸಿ ಮ |
ನ್ನಣೆಗೈದುದಕೆ ಫಲವು || 4 || 305 ||

**ಭೈರವಿ - ಅಷ್ಟ**
ಕರುಣೆಗಳಹುದಾದರೆ | ಕಾಶೀರಾಜ |
ಪೊರದಂಬೆಯಳನೊಯ್ವರೆ ||
ವರದ ಭಾಷೆಯ ತಪ್ಪಿ | ಕೊರಳ ಕೊಯ್ವಲ್ಲಿ ಬಂ |
ದಿರಿ ಕುಟಿಲವ ನೆನದು || 1 ||
ಅರಿತು ಮಾತಾಡು ನೀನು | ಅಂಬೆಯ ಕಾಯು |
ವರೆ ಬಂದ ರಾಮನನು ||
ಧುರದಿ ಪಿಮ್ಮೆಟ್ಟಿಸಿ | ಯೊರದ ಭಾಷೆಯ ಕಾಯ್ದ |
ಯರಿಯದೆ ಗಳಹದಿರು || 2 ||
ಕುರುರಾಯಗೆಣಿಸಿದಂತೆ | ಈ ತರುಣಿಯ |
ಪರಿಣಯವೆಸಗು ಪಿಂತೆ ||
ವರದುದು ನಿಜವಲ್ಲ | ದರೆ ರಾಮನೊಳು ಕಾದಿ |
ದುರುಹೆಮ್ಮೆ ಗಳಹದಿರು || 3 ||
ಯದುಪತಿ ಬಿಡ ನಿನ್ನನು | ಯೆಂಬುದರಿಂದ |
ಹದಗೆಟ್ಟು ನುಡಿದೆ ನೀನು ||
ಇದಿರಾಗೆಂದೆಚ್ಚ ಬಾ | ಣದ ಮಳೆಯನು ಕಂಡು |
ಮುದದಿಂದ ಕಡಿದೆಂದನು || 4 || 309 ||

**ಕಾಂಬೋಧಿ - ಝಂಪೆ**
ಜಾಹ್ನವಿಗೆ ಸತ್ಪುತ್ರರು | ನೀವು ನ |
ಮ್ಮನ್ವಯದಿ ಬಲು ಹಿರಿಯರು ||
ಮಾನ್ಯರೊಳು ಬಹು ಮಾನ್ಯರು | ಯಿಂತಿರಲು |
ಭಿನ್ನಭೇದಗಳಿಗ್ಯಾರು || 1 ||
ಯೆಲೆ ಭೀಮ ತಿಳಿಯೆ ನೀನು | ಕುರುರಾಯ |
ಗಳಸಿದನ್ಯಾಯವೇನು ||
ಛಲವಿಡಿದು ಪೋದ ಬಳಿಯ | ವೈರದಿಂ |
ಮಲತು ಬರಲಿದೇನಿದಯ್ಯ || 2 ||
ಕುರುಪತಿಯ ನಡತೆಗಳನು | ಪೇಳುವರೆ |
ಉರಗಪತಿಗರಿಯದಿನ್ನು ||
ಯಿರಲದನು ಪೇಳಬೇಕೇ | ನಿಮಗಿಷ್ಟು |
ವರುಷಗಳು ಸಂದುದ್ಯಾಕೆ || 3 ||
ಮಲ್ಲರೊಳು ಶ್ರೇಷ್ಠನೆಂದು | ಹೆಮ್ಮೆ ನ |
ಮ್ಮಲ್ಲಿ ತೋರದಿರು ಬಂದು ||
ವಳ್ಳಿತಿರಬೇಕು ನೀನು | ಪಿಂತೆ ಸರಿ |
ಯಲ್ಲದರೆ ಕರುಣವಿಡೆನು || 4 ||
ನೆನೆಯದಳಿವಿಲ್ಲವೆಂದು | ಬಲು ಹೆಮ್ಮೆ |
ತಲೆಗಡರಿ ಮೀರಿತಿಂದು ||
ಹಣಿದು ಸೊಂಟದ ಕೀಲನು | ಮುರಿದಪೆನು |
ಜುಣುಗಿ ಬಿದ್ದಿಹುದೆಂದನು || 5 || 314 ||

**ಮಾರವಿ - ಏಕ**
ಮಾರುತಿ ಮಾತಿಗೆ ವೀರಾವೇಶದಿ |
ತೋರು ಸತ್ವವನೆಂದು ||
ಕೂರಲಗನು ಸುರವಾರ ಬೆದರೆ ಝೇಂ |
ಕಾರದಿ ತೆಗದೆಚ್ಚ || 1 ||
ಗಣಿಸದೆ ಮಾರುತಿ ಘನತರ ಮುಷ್ಟಿಯೊ |
ಳ್ಕಣೆಗಳ ಪುಡಿಗೈದು ||
ನೆನದುಕೋ ಕುರು ಭೂಪನನೆನುತೆರಗಿದ |
ನನುಪಮ ಗದೆಗೊಂಡು || 2 ||

ಗದೆಯನು ಗದೆಯೊಡ್ಡಿದು ಸೈಗರದನು |
ಕುದಿದೊಗುವಂಬುಗಳ ||
ಬೆದರದೆ ಮರುತಜನೊದರುತ ಭುಜಗಳ |
ಕದನದಿ ಪುಡಿಗೈದ || 3 || 317 ||

**ಭಾಮಿನಿ**
ದುರುಳನಹ ಕೈಟಭನ ಜಂಭನ |
ಪುರವಿಭಾಡನ ಶೂರ ಪದ್ಮನ |
ಶಿರದಶನ ಕಲಿಕುಂಭಕರ್ಣನ ಕಾರ್ತವೀರ್ಯಕನ ||
ಧುರಗಳಚ್ಚರಿಯಲ್ಲೆನುತ ಸುರ |
ವರರು ತಲೆದೂಗಲ್ಕೆ ಪಂಥದಿ |
ಮರುತಸುತ ಗಾಂಗೇಯರೆಚ್ಚಾಡಿದರು ಧರೆಬಿರಿಯೆ || 1 || 318 ||

**ಸೌರಾಷ್ಟ್ರ - ತ್ರಿವುಡೆ**
ಪರಶುರಾಮನೊಳಳವಿ ಗೈದಿಹ |
ಗರುವವಿನಿತೇ ಮಕ್ಕಳಾಟದ |
ತೆರದಿ ಮುನಿಯದೆ ಬಿಟ್ಟ ನಿನ್ನನು | ಧುರದಿ ರಾಮ || 1 ||
ಯೆಂದಡೆಂದನು ಮರುಳೆ ನಿನ್ನಯ |
ತಂದೆ ತಂದೆಯ ಬಲ್ಲೆ ನೀನೇ |
ನೆಂದರೇನ್ಮಾಣಿಕ್ಯ ಮರ್ಕಟ | ಗೆಂದರಿವುದೆ || 2 ||
ಮಾಗಧನು ನಿನ್ನಂತೆ ಯೆನ್ನೊಳು |
ಸಾಗಿದನು ಸಮರದಲಿ ರಣಜಯ |
ವಾಗದಳಿಯದೆ ಪ್ರಾಣ ಮಾತ್ರದಿ | ಪೋಗಿ ನೀವು || 3 ||
ವಳ್ಳಿತಾಯ್ತುದಕೇನಿದಿರು ನಿಲು |
ನಿಲ್ಲೆನುತ ಬ್ರಹ್ಮಾಸ್ತ್ರವೆಸೆಯಲು |
ಮಲ್ಲಭೀಮನು ನೋಡಿ ತಾ ತ | ನ್ನಲ್ಲಿ ತಿಳಿದು || 4 ||
ಇದನು ತಾಳುವರಿಲ್ಲೆನುತ ನಿಜ |
ಹೃದಯದಲಿ ಪರಬ್ರಹ್ಮ ಮೂರ್ತಿಯ |
ಮುದದೊಳೇಕೋಭಕ್ತಿಯಿಂ ನೆನ | ಸಿದನು ಬಿಡದೆ || 5 ||
ಕೆಂಡಗಾರುತ ಬ್ರಹ್ಮಶರ ಭೂ |
ಮಂಡಲವ ನಡುಗಿಸುತ ಭೀಮನ |
ಕಂಡು ಮುಟ್ಟದೆ ಸರಿದುದಭ್ರದೊ | ಳಂಡಲವುತ || 6 || 324 ||

**ವಾರ್ಧಕ**
ಕಂಡನಿಲಜಾತ ಖಿಡಿಗೆಂಡ ಸೂಸುತ ಕಡೆಯ |
ರುಂಡಮಾಲನ ತೆರದಿ ರೋಷಪಾವಕನ ಕೈ |
ಕೊಂಡು ಹರಿ ನಾದವಂ ಗೈದಮರನದಿಸುತನ ಹಾಯ್ದು ಮುಂದಲೆಯ ತುಡುಕಿ ||
ಕಂಡವರ ಮಾತ ಕೇಳಿದ ಫಲವಿದೆಂದು ಗಜ |
ಗಂಡ ಕೇಸರಿಯಂತೆ ಕೆಡಹಿ ಕೊರಳೌಕೆ ಮಿಗೆ |
ಕಂಡು ಕೃಷ್ಣಾರ್ಜುನರು ಹರಿತಂದು ಭೀಮನಂ ಪಿಡಿದು ನಿಲು ನಿಲ್ಲೆನುತ್ತ || 1 || 325 ||

**ಸುರುಟಿ - ಏಕ**
ಎಲೆ ಮರುತಜ ನೀನು | ಕೋಪಿಸಿ |
ಕೊಲುವೆಯ ಭೀಷ್ಮನನು ||
ಹಳೆ ಮುದುಕನು ಮಿಗೆ ತಿಳಿಯಲು ಮುತ್ತಯ್ಯ |
ಕುಲಕಪಕೀರ್ತಿಯ ಗಳಿಸುವರೇನಿದು || 1 ||
ಬಿಡು ಬಿಡೆನುತ ಬಿಡಿಸಿ | ಶ್ರೀ ಹರಿ |
ಪಿಡಿದೊಡನಾದರಿಸಿ ||
ತಡವರಿಸುತ ನೆರಿ ಪಿಡಿದು ತಾ ಬೀಸುವ |
ಜಡಜದಳಾಕ್ಷಗೆ ನುಡಿದ ಗಾಂಗೇಯನು || 2 ||
ಭೀಮನೊ ಕಡೆಗಿವನೂ | ಪ್ರಳಯದ |
ಕಾಮಹರನೊ ಮೇಣು ||
ಸಾಮಾನ್ಯದೊಳಿದಿರೀ ಮಹಿಯೊಳಗರಿ |
ವಾಮರುಳ್ಳೈ ಕುರು ಭೂಮಿಪ ಕೆಟ್ಟನು || 3 || 328 ||

**ಭಾಮಿನಿ**
ಎಂದು ಕೃಷ್ಣನೊಳಪ್ಪಣೆಯ ಪಡ |
ದಂದು ಭೀಷ್ಮನು ತಿರುಗಲೀಕ್ಷಿಸಿ |
ಮುಂದುವರಿದುದು ಕೋಪಶಿಖಿ ಕೋದಂಡವನು ತುಡುಕಿ ||
ಬಂದಿಗಾರರು ಮರಳಿದರೆ ಲೇ |
ಸೆಂದು ದಿವ್ಯಾಸ್ತ್ರಗಳ ಸುರಿವುತ |
ಮಂದಹಾಸದಿ ತಡದು ಫಲುಗುಣಗೆಂದನಾ ಕರ್ಣ || 1 || 329 ||

**ಭೈರವಿ - ಏಕ**
ಎಲೆ ಫಲುಗುಣ ಕೇಳಿಂದೂ | ನೀ|
ಹಳುವಾತಪದಲಿ ನೊಂದು ||
ತಲೆಗೇರಿದ ಪಿತ್ಥವನೂ | ನಿ |
ಲ್ಲಿಳಿಸುವೆನೆನಲುಸುರಿದನು || 1 ||
ಕುರುಪತಿ ಸಂಸರ್ಗದಲೀ | ಮತಿ |
ಬರಡಾದುದದೇನೆನಲಿ ||
ಅರಮನೆಯರ್ಥವ ತಿಂದು | ಯೇ |
ನೊರದಪೆ ಬಸವನೊಲಿಂದು || 2 ||
ಯದುಪತಿಯೊಳು ಕೇಳ್ದಿಂದು | ಮ |
ತ್ತಿದಿರಾಗೆನ್ನೊಳು ಬಂದು ||
ತ್ರಿದಶರು ಮೆಚ್ಚುರು ನಿನಗೆ | ಯೇ |
ನೊದರುವೆ ಕರಸಿಕೊಳ್ಳವಗೆ || 3 ||
ಅಣ್ಣನ ನೀತಿ ನಡತೆಗೆ | ಮು |
ಕ್ಕಣ್ಣಸಖನು ನಮ್ಮೆಡೆಗೆ ||
ಮನ್ನಣೆಯೊಳು ಬಂದಿಹನು | ಅದ |
ಕೆನ್ನೊಳು ಮತ್ಸರವೇನು || 4 ||
ನೀತಿಯು ಪಳ್ಳಿತು ನಿನಗೆ | ನಿಜ |
ತಾತನದಾವವ ಕಡೆಗೆ ||
ನಾ ತಿಳಿದಿಹೆ ನಿನ್ನುವನು | ಹೆಚ್ಚು |
ಮಾತಾಡಿದರ್ಥಲವೇನು || 5 || 334 ||

**ವಾರ್ಧಕ**
ಬಲೆಗಾರರೊಡನೆ ಕಪಿಯಂತಿರಲು ನಿನ್ನ ಖಳ |
ತಿಲಕ ಕೌರವ ತಂದು ಮನ್ನಿಸಲ್ಕದರಿಂದ |
ತಲೆಗೆ ಮದ್ಯವನೆರದ ತೆರನಾಯ್ತು ವಂಗರಾಷ್ಟ್ರವ ಕೊಡಲು ಚೇಳೂರಿದ ||
ಫಲವಾಯ್ತು ನಲಿಯದಿರು ತೊಲಗೆಂದು ಮಾರ್ಗಣವ |
ಮಳೆಯಂತೆ ಕವಿಸೆ ಮಿತ್ರಜ ಕಂಡು ರೋಷದಿಂ |
ತಳುವದರ್ಧದಿ ಕಡಿದು ನಿಲ್ಲೆಂದು ತೆಗದೆಚ್ಚ ನಾಲ್ಕಡಿಯೆನಲ್ಕೆ ಭರದಿ || 1 || 335 ||

**ಮಾರವಿ - ಏಕ**
ಬರುವಂಬುಗಳನು ತರಿದರ್ಜುನ ಮಿಗೆ |
ಮರುತಸಖಾಸ್ತ್ರವನು ||
ಭರದಿಂದೆಚ್ಚಡೆ ಸರುವತ್ರಾನನ |
ಶರದಿಂ ಖಂಡಿಸಿದ || 1 ||
ಮತ್ತರ್ಜುನನು ಪವಿತ್ರ ಪೃಥುವಿಧರ |
ನಸ್ತ್ರವ ಹೂಡಲ್ಕೆ ||
ಕತ್ತರಿಸಲು ಗರುಡಾಸ್ತ್ರದಿ ಕಂಡಾ |
ಪಾರ್ಥನು ಭುಜವಲುಗೀ || 2 ||
ಅರುಣಾನುಜ ಶರ ಸುರಿಯಲು ಕರ್ಣನು |
ಸರಿಸಲು ತಮದಿಂದ ||
ತರಣಿ ಕಳಂಬವು ಬರಲಾ ಭಾಸ್ಕರ |
ಶರದಿಂ ಖಂಡಿಸಿದ || 3 ||
ಅದುಭುತ ವಿಧಿಶರಕದರಿಂದಲಿ ಸಾ |
ಮದಿ ತಡೆಯಲು ಬಿಡದೆ ||
ಕದನದಿ ಮೃತ್ಯುವ ಕೆದರಿಸಿ ಬಿಟ್ಟಡೆ |
ಯದರಿಂದಲಿ ಗೆಲಿದ || 4 ||

ಮತ್ತರ್ಕಜ ಮಯನಿತ್ತ ಮಹಾದ್ಭುತ |
ಶಕ್ತಿಯ ಸೆಳದಿಡಲು ||
ಪೃಥ್ವಿ ನಡುಗೆ ಕಲಿ ಪಾರ್ಥನನೆರಗಲು |
ಅತ್ತ ಮೂರ್ಛೆಯ ತಳದ || 5 || 340 ||

**ಭಾಮಿನಿ**
ಒಕ್ಕಣಿಸಲೇನರಸ ಕೇಳ್ಳೈ |
ರಕ್ಕಸಾರಿ ವೃಕೋದರರ ನುಡಿ |
ಲೆಕ್ಕಿಸದೆ ಬೀಳ್ಕೊಂಡು ಕುರುಪತಿ ಸುಭಟ ವರ್ಗವನು ||
ಮಕ್ಕಳಾಟಿಕೆಯಿಂದ ಬಾಣದ |
ತೆಕ್ಕೆಯಲಿ ಮಲಗಿಸುತ ಮಿಕ್ಕಿ ತ್ರಿ |
ಯಕ್ಷನೋಲಭಿಮನ್ಯು ತಡದಿಂತೆಂದನರ್ಕಜಗೆ || 1 || 341 ||

**ಶಂಕರಾಭರಣ - ಮಟ್ಟೆ**
ಮುನಿಗಳೊಳು ಪುನೀತ ಕಾಶ್ಯ |
ಪನಿಗೆ ಮೂರುಲೋಕದೀಪ |
ದಿನಪಸುತನೆ ಕತ್ತೆ ಗಜದಿ | ಜನಿಸಿದಂದದಿ ||
ಜನನಿಯೌವನಕ್ಕೆ ಕುಂದು |
ದಿನವ ಕಳಿವೆ ಶ್ವಾನನಂತೆ |
ಘನದ ಭಾರ ಧರೆಗೆ ಸ್ವಾಮಿ | ಗಳಘ ದ್ರೋಹಿಯೇ || 1 ||
ಯೆಂದಡೆಂದ ಕರ್ಣ ನಿನ್ನ |
ತಂದೆಗಾರ್ಕೆಗೊಳಿಸಿ |
ಬಂದು ಮಾತನಾಡು ಬರಿದೆ | ಕಂದ ನಿನ್ನನು ||
ಕೊಂದು ಬಿಡುವೆನೆಂದು ಮುನಿದ |
ರೊಂದು ಬಾಣಕಿಲ್ಲ ಜಗದಿ |
ನಿಂದಿಸುವರ ವಾದ ಬಪ್ಪು | ದೆಂದಡೆಂದನು || 2 ||
ಮುಚ್ಚು ಬಾಯ ನ್ಯಾಯರೀತಿ |
ಇಚ್ಛೆ ಬಂದ ತೆರದಿ ನಿನಗೆ |
ನಚ್ಚಿ ಕುರುಮಹೀಶನಂತೆ | ಹುಚ್ಚನಾದೆಲಾ ||
ಹೆಚ್ಚು ಕುಂದ ನೆನೆಯದೀಗ |
ಕೊಚ್ಚಿ ಬಲಿಯನೀವೆ ತಾಳು |
ದುಶ್ಚರಿತ್ರ ನಿಲ್ಲೆನುತ್ತ | ಲೆಚ್ಚ ಬಾಣವ || 3 ||
ಅರರೆ ತರಳ ನಮ್ಮ ನೀನು |
ಕರಕರಿಸದೆ ಬೇಗ ಪೋಗಿ |
ಹಿರಿಯ ತಂದೆ ಭೀಮಸೇನ | ಗರುಹು ತಾತನ ||
ಪರಿಭವವನೆನುತ್ತ ಬರುವ |
ಸರಳ ಕಡಿದು ಮೋಹನಾಸ್ತ್ರ |
ಭರದಿ ಬಿಡೆ ತದಸ್ತ್ರದಿಂದ | ಸರಿಸುತೆಂದನು || 4 ||
ಎಲವೊ ಯಮುನೆ ಸೋದರನ್ನ |
ಕೆಲಸದವರು ಕರವರ್ನಿನ್ನ |
ಕಳುಹಿಸುವ ಸುಯೋಧನನೊಳು | ತಿಳಿದು ಬಂದರೆ ||
ಹೊಲಬುಗಾಣಿಸುವೆನು ಸಣ್ಣ |
ದಲಗಿನಿಂದಲೆನುತ ಬಿಲ್ಲ |
ತಳುವದೆಚ್ಚು ಕಡಿಯೆ ಕರ್ಣ | ನಳುಕಿ ನುಡಿದನು || 5 ||
ವೀರನೈ ಶಭಾಸು ನರಕು |
ಮಾರನಹುದು ನಿನಗೆ ನೀತಿ |
ಯಾರು ಪೇಳ್ವರಿಲ್ಲದಾಯ್ತೆ | ಪೋರ ಹಿಂದಕೆ ||
ಸಾರು ಸಾರು ಸಾರು ನಿನಗೆ |
ಮೂರು ಬಾರಿ ಸೋತು ಪೇಳ್ವೆ |
ಹಾರಬೇಡ ನಮ್ಮ ಧುರ ಪು | ರಾರಿಗಸದಳ || 6 ||
ಗಂಡುಸಹುದೊ ಕರ್ಣ ನೀ ಶಿ |
ಖಂಡಿ ಭಂಡರೊಳಗೆ ಭಂಡ |
ಖಂಡಪರಶುವೆಣೆಯೆ ನಿನಗೆ | ಚಂಡ ಸಾಹಸಿ ||
ದೊಂಡೆಗರುಳ ತೆಗೆವೆನೆನುತ |
ಕೆಂಡ ಸುರಿವ ಬಾಣದಿಂದ |
ಖಂಡಿಸಿದ ವರೂಥ ಹಯವ | ಕಂಡು ಪುನರಪಿ || 7 || 348 ||

**ಭಾಮಿನಿ**
ಪೊಡವಿಪತಿ ಕೌರವನೆ ನಿನ್ನನು |
ಬಿಡಿಸಿಕೊಳಲೆಂದೆನುತ ಪಾಶದಿ |
ಜಡಜಮಿತ್ರಾತ್ಮಜನ ಬಂಧಿಸಿ ಜರದು ಕುರುಬಲವ ||
ಪುಡಿಗಯಿವುತಿರಲಿತ್ತ ಕರ್ಣನ |
ಹೆಡಮುಡಿಯ ಪಡೆಯೊಳಗೆ ಬಿಡಿಸಲು |
ಒಡನೆ ಚೇತರಿಸುತ್ತ ಪಾರ್ಥನು ತಡದನರ್ಕಜನ || 1 || 349 ||

**ಕಾಂಬೋಧಿ - ಝಂಪೆ**
ಅನಿತರೊಳು ದುಶ್ಶಾಸನನು ವಿದುರ ದ್ರೋಣಸುತ |
ಜನಪ ಕುರುರಾಯರೊಂದಾಗಿ ||
ಮುನಿದು ಪಾರ್ಥನೊಳಿದಿರು ನನೆಯಂಬುಗಳ ಕವಿಸೆ |
ಹಣಿದು ಫಲುಗುಣ ಮರಳಿ ತೊಟ್ಟ || 1 ||
ಬಾರಿ ಬಾರಿಗೆ ನರನ ಗಾರುಗೆಡಿಸುತ್ತಲಿ ಪ |
ಚಾರಿಸುತ ಕಂಗೆಡಿಸುತಿರಲು ||
ಮಾರುತಿ ಮುರಾರಿ ಸಹ ವೀರ ಫಲುಗುಣಗೆ ಮೈ |
ದೋರಿದರು ಕುರುಬಲಕ್ಕಿದಿರು || 2 ||
ಸರಿದ ಕುರುರಾಯ ಪಿಂತಿರುಗಿದನು ದ್ರೋಣಿ ಮಿ |
ಕ್ಕಿರುವರೇನಾದರೆಂಬುದನು ||
ನೆರೆಬಲ್ಲವರ ಕಾಣೆ  ದೊರೆರಾಯ ಚಿತ್ತವಿಸು |
ಅರುಹಲೇನಾರಣೋತ್ಸಹವ || 3 || 352 ||

**ಕಂದ ಪದ್ಯ**
ಬಳಿಕಾ ಕುರುಕುಲತಿಲಕಂ ದುರ್ಮ್ಮನದಿ |
ನಳಿನಾಪ್ತಜ ಮೊದಲಾದವರ ನಿರೀಕ್ಷಿಸುತಂ ||
ಹಲವಂಗದಿ ಚಿಂತಿಸುತಲಿ |
ತಿಳುಹಿದ ದುಶ್ಶಾಸನನೊಡನಂತರಮಂ || 1 || 353 ||

**ನೀಲಾಂಬರಿ - ಝಂಪೆ**
ಅನುಜ ಲಾಲಿಸು | ವನಜಸಂಭವ |
ಮುನಿದು ತನ್ನಯ | ಹಣೆಯೊಳ್ಬರದಿಹ ||
ಘನ ಬಲಾಢ್ಯರು | ನಮ್ಮೊಳೀರ್ದರು |
ಜನನ ಫಲವಿದು | ಜುಣುಗೆ ತಪ್ಪದು || 1 ||
ಯಾರ ನಂಬಿದ | ರೇನು ಸುಮ್ಮನೆ |
ನೀರ ಮಥಿಸಲು | ಫಲವು ದೊರವುದೇ ||
ವಾರಣಾಖ್ಯದ | ದೇಶವನ್ನು ನೀ |
ಸಾರಿ ಪಾಲಿಸು | ತನಗೆ ಸಾಕಿದು || 2 ||
ಬದರಿಕಾಶ್ರಮ | ಕೈದಿ ಪೋಪೆನು |
ಹೃದಯ ಚಂಚಲ | ಗೊಳದೆ ಧೈರ್ಯದಿ ||
ಬದಲು ನುಡಿಯದೇ | ವದಗಿ ಪೋಗಯ್ಯ |
ಕದನವ್ಯಾರೊಳು | ಬೇಡ ಸುಮ್ಮನೆ || 3 || 356 ||

**ವಾರ್ಧಕ**
ತಂದೆಗಂ ಧೈರ್ಯಮಂ ಪೇಳು ನಮ್ಮನು ಮೊದಲೆ |
ಹೊಂದಿಕೊಂಡಿರುತಿರ್ಪ ಮಂದಿಮಾರ್ಬಲಕೆಲ್ಲ |
ಕುಂದು ಕೊರತೆಗಳಿಡದೆ ಚಂದದಿಂ ಪಾಲಿಸುತ ಮಂದಿರದ ಮಡದಿಯರ್ಗೆ ||
ಸಂದ ವಾರ್ತೆಯ ತಿಳುಹೆನುತಲಶ್ರು ಸೂಸೆ ಪೋ |
ಗೆಂದೆನಲು ಜವನ ಕೋಪಾಂತು ದ್ವಾದಶಾತ್ಮ |
ನಂದನನು ಭುಜವದುರಿ ಧನುವ ಝೇಂಕರಿಸುತ್ತ ಜನನಾಥಗಿಂತೆಂದನು || 1 || 357 ||

**ಘಂಟಾರವ - ಅಷ್ಟ**
ತೆಗೆ ತೆಗೇ ತಾಳ್ದ ದುಗುಡವ ದೊರೆರಾಯ |
ಪೊಗಿಸುವೆನು ಯಮಪುರಕೆ ರಿಪುಗಳ |
ಬಗೆವೆನೇ ಕೊಡು ವೀಳ್ಯವಾ || ತೆಗೆ ತೆಗೆ || 1 ||
ಭೀಮ ಪಾರ್ಥರನೀಮಹಾಹವದಿ ನಿ ||
ರ್ನಾಮವೆನಿಸುವೆ ಬೆಂಬಲಕ್ಕಾ |
ವ್ಯೋಮಕೇಶನೆ ಬಂದರೂ || ತೆಗೆ ತೆಗೆ || 2 ||

ತರಳೆಯನಿಂದು ತುರುಬನು ಪಿಡಿದೊಯ್ದು |
ತರುವೆ ಬಿಡಿಸುವರ್ಯಾರು ನೋಡುವೆ |
ಪರಿಕಿಸೆನ್ನಯ ಶೌರ್ಯವ || ತೆಗೆ ತೆಗೆ || 3 || 360 ||

**ಸೌರಾಷ್ಟ್ರ - ತ್ರಿವುಡೆ**
ಎನುತೊಡಂಬಡಿಸುತ್ತ ರಥವನು |
ಘನಪರಾಕ್ರಮಿಯಡರಿ ಚಾಪ |
ಧ್ವನಿಯದೋರುತ ಬರಲು ಕಂಡ | ರ್ಜುನನು ಭರದಿ || 1 ||
ವರಮಹಾ ಗಾಂಡೀವವನು ಝೇಂ |
ಕರಿಸಿ ಪಿಡಿಯಲು ದೇವದತ್ತವ |
ವರಮಹಾರವಕಳುಕಿ ಸುರರಂ | ಬರದಿ ನೆರೆಯೆ || 2 ||
ಘರ್ಜಿಸುತ ಕಲಿಕರ್ಣ ತಡದಾ |
ನಿರ್ಜರೇಂದ್ರನ ಸುತನಿಗೆಂದನು |
ಮೂರ್ಜಗಕೆ ನೀ ಗಂಡನಲ್ಲದೆ | ಧೂರ್ಜಟಿಯೊಳು || 3 ||
ಸೆಣಸಿದಧಟನು ನೋಡಬೇಕೆಂ |
ದೆನುತ ಬಯಸಿದು ಬಂದಿಹೆನು ಕೊಡು |
ರಣವ ಹುಲುಬಾಣಗಳ ತೊಡದೆಂ | ದೆನಲು ನುಡಿದ || 4 || 364 ||

**ಭೈರವಿ - ಅಷ್ಟ**
ನಾಚಿಕೆ ಯಿಲ್ಲದಾದೆ | ಮನದಿ ಬೇರಾ |
ಲೋಚನೆ ಕುಟಿಲ ಹೀಗೆ ||
ಸೂಚನೆ ತೋರ್ಪೆ ಕಾಲೋಚಿತ ಫಲ ನೀಚಾ |
ನೀಚನೆಂದೆನಲೆಂದನು || 1 ||
ಭಂಗಾರ ಮಸಿ ಬಣ್ಣವೇ | ಯೆಂದಿಗು ಸಲ್ಲ |
ಶೃಂಗಾರ ಬಯಲಾಟವೇ ||
ಕಂಗಳಿಲ್ಲದಗೆ ಫಲಂಗಳೇನ್ನಗಲು ಬೆ |
ಳ್ದಿಂಗಳ ಭೇದಗಳು || 2 ||
ಎಲೆ ಕರ್ಣ ನೀ ಮೊದಲು | ಯಾರನು ಗೆಲ್ದ |
ತಿಳಿಯಲು ಬವರದೊಳು ||
ಇಳೆಗೆ ಕಂಟಕನಾಗಿ ಗಳಹುವೆ ಹೆಮ್ಮೆಯಿಂ |
ಫಲವೇನು ಬಿಡು ಮರುಳೆ || 3 ||
ವೈದೀಕ ವಿಧಿಯ ನೀನು | ಬಲ್ಲವನಲ್ಲ |
ವಾದರು ಯಮಜಾತನು ||
ಸಾಧಿಪ ಸತ್ಯದಿ ಪೋದಲ್ಲಿ ಜಯ ನಿನ್ನಿಂ |
ದಾದುದೇನೆನಲೆಂದನು || 4 ||
ನೀನೇ ಪುನೀತನೆಂದೂ | ಕೌರವ ಬಹು |
ಮಾನದಿ ಸಲಹಲಂದು ||
ಹಾನಿ ಪೋದಲ್ಯಲ್ಲಿದೇನುಪಕಾರವ |
ಕಾಣಿಸಿಕೊಟ್ಟೆ ನೀನು || 5 ||
ಒಂದು ಬಾರಿಗೆ ಗೆಲಿದ | ಹಂಕೃತಿ ಬಾಯ್ಗೆ |
ಬಂದಂತೆ ನುಡಿವೆಯದ ||
ಕುಂದಿಸುವೆನು ಫಲದಿಂದಲೀಕ್ಷಿಸುಯೆನು |
ತಂದು ತಾ ತೆಗದೆಚ್ಚನು || 6 || 370 ||

**ಶಂಕರಾಭರಣ - ಮಟ್ಟೆ**
ಬರುವ ಶರವ ನೋಡಿ ನರನು ತರಿದು ಖತಿಯನು |
ಧರಿಸಿ ದಿವ್ಯ ಬಾಣಗಳನು ಸುರಿವುತೆಂದನು ||
ಕರೆಸು ಬೆಂಬಲಕ್ಕೆ ಹರಿಹರರನು ಹಿಂದಕೆ |
ತಿರುಗಿ ಸರಿಯ ಬೇಡವೆನಲು ಭರದಿ ನಿಮಿಷಕೆ || 1 ||
ವಿಜಯನೆಚ್ಚ ಶರವ ಕಡಿದು ಗಜರಿ ಕರ್ಣನು |
ಭುಜವನೊದರಿ ದಿನಪಶಕ್ತಿ ಭಜಿಸಿ ಸೆಳದನು ||
ಭುಜಿಸೆನುತ್ತ ತಿರುಹಿ ಬಿಡಲು ಅಜ ಸುರಾದ್ಯರು |
ಗಜಬಜಿಸಲು ಬಂದುದಾಗ ತ್ರಿಜಗ ನಡುಗಲು || 2 ||
ಪಾರ್ಥನುರವ ಕೀಲಿಸಲ್ಕೆ ಧಾತ್ರಿಗೊರಗುತ |
ವಾರ್ತೆ ಸೂಸಲೆದ್ದು ನಿಲ್ಲು ಧೂರ್ತನೆನ್ನುತ ||
ಮೂರ್ತಿಗಳನು ಸೇರಿ ಜೀವ ಮಾತ್ರ ಉಳುಹಲು |
ಕೀರ್ತಿ ಬರುವುದೆನುತ ಪಶುಪತಾಸ್ತ್ರ ಹೂಡಲು || 3 || 373 ||

**ಭಾಮಿನಿ**
ಬೆಂದುದೋ ಬ್ರಹ್ಮಾಂಡ ಜ್ವಾಲೆಗೆ |
ಸಿಂಧುಗಳು ಕುದಿದುಕ್ಕಿದವೊ ಹಾ |
ಯೆಂದು ಸುರರಳುಕುತಿರೆ ವ್ಯೋಮಾಂಗಣದಿ ಬರೆ ನೋಡಿ ||
ನಿಂದು ಕೋದಂಡವನಿಳುಹಿ ಪೂ |
ರ್ಣೇಂದುಮೌಳಿಯನೇಕ ಮಾನಸ |
ದಿಂದ ಸ್ಮರಿಸಲು ಹಿಂದೆ ತಿರುಗಿದುದಸ್ತ್ರ ಬಯಲಾಗಿ || 1 || 374 ||

**ಭೈರವಿ - ಅಷ್ಟ**
ಎಲವೊ ಪಾರ್ಥನೆ ಪುರಹರನೊಳೂ | ಕಾದಿ |
ಗೆಲಿದ ಶಕ್ತಿಯದಾಯ್ತೆ ಧುರದೊಳೂ ||
ತಿಳಿಯೆ ನೀ ಮಕ್ಕಳೊಳ್ನಲಿದಾಡಿದಂತಲ್ಲ |
ದುಳಿವೆಯ ಶಿವ ಮುನಿಯೆ || 1 ||
ಯೆಲವೊ ನಿನ್ನನು ಗೆಲದುಳಿದರೆ | ಖತು |
ಕಳಿದಬಲೆಗೆ ಶಾಂತಿಯಳಿದರೆ ||
ತಿಳಿದುಕೊಳ್ಳಂಥಾ ವೃಷಳಿರಮಣನ | ಘೋರ |
ನೆಲೆ ತನಗಾಗಲೆಂದ || 2 ||
ಪಿಂದಳವಿಯಲಿ ತಾನು | ಪೋದರೆ ನಿಜ |
ತಂದೆಯಿಂದಂಶವನು ||
ಕುಂದದೆ ಸೆಳದ ಮದಾಂಧನ ಗತಿ ಬರ |
ಲೆಂದೆನಲಿಂತೆಂದನು || 3 ||
ದೇಶಕಾಲಕೆ ತಕ್ಕುದ | ನೋಡದ ಪರ |
ದೇಶಿಯ ಸಂಸರ್ಗದ ||
ಹೇಸಿಕೆಗೊಳದೆ ಬಂದಾಸೂಕಾರ್ಯದಲಿ ಮೇ |
ಳೈಸು ಶೀಘ್ರದೊಳೆಂದನು || 4 ||
ಚಂದವಾಯ್ತಾದರೆಂದು | ಮಿತ್ರಜನು ಮಾ |
ಹೇಂದ್ರ ಶಕ್ತಿಯ ಸೆಳದಿಡಲಂದು ||
ನೊಂದು ಪಾರ್ಥನು ಮೂರ್ಛೆಯಿಂದೊರಗಲು ರವಿ |
ನಂದನ ಜರದೆಂದನು || 5 || 379 ||

**ನಾದಾರಿ - ಅಷ್ಟ**
ನೋಡಿ ಶಿವನೊಳೆಚ್ಚಾಡಿದ ನರನು |
ರೂಢಿಯೊಳ್ಪೊರಳುವ ನೋಡಲಿನ್ನೇನು || ನೋಡಿ || ಪಲ್ಲ ||
ಮುನ್ನ ಭಾಷೆಯ ತೊಟ್ಟ | ಮನ್ನಿಸದಾದ ಭ್ರಷ್ಟ ||
ತನ್ನಂತೆ ತಾನೆ ಕೆಟ್ಟ | ಯೆಣಿಸಾದಂತ ಕಷ್ಟ || ನೋಡಿ || 1 ||
ಮಾರುತಿ ನೋಡದಿರು | ನಾರಿಚೋರಾಪಾಯದೋರು ||
ಭಾರಿ ಭುಜರು ಬನ್ನಿರ್ಯಾರು | ತೋರಿ ಸಹಸಾವೆನ್ನೊಳಿದಿರು || ನೋಡಿ || 2 ||
ಸುಮ್ಮನೆ ಕಾಡೊಳು ತಿರಿದು | ಬ್ರಹ್ಮ ಲಿಪಿಯ ತೀರಿಸುವುದು ||
ಹೆಮ್ಮೆ ಯಾಕೆ ಕಾಣಿಸುವುದು | ನಮ್ಮೊಳಳವೆ ಸೆಣಸುವದು || ನೋಡಿ || 3 || 382 ||

**ಭಾಮಿನಿ**
ಇನಿತು ಕರ್ಣನು ನುಡಿಯೆ ಪ್ರಳಯದ |
ಮನುಮಥಾಂತಕನಂತೆ ಮಾರುತಿ |
ಘನ ಗದಾದಂಡವನು ತಿರುಹುತ ಘರ್ಜಿಸುತಲೇಳೆ ||
ಅನಕ ಮೈಮುರಿದೆದ್ದು ಪಾರ್ಥನು |
ಹಣೆದು ಕಂಬದೊಳೊಗದ ನರಹರಿ |
ಯೆನೆ ಪತಂಗಾತ್ಮಜನ ತಡದಿಂತೆಂದ ಪಲ್ಮೊರದು || 1 || 383 ||

**ಮಾರವಿ - ಏಕ**
ಬಲೆಬೀಸುವ ಕೈಚಳಕವನೆನ್ನೊಳು |
ಗಳಸಲು ಬಂದಿಹೆಯಾ ||
ಕೊಳುಗುಳಕೆನ್ನಿದಿರೊಳು ನಿಲ್ಲೆನುತಲೆ |
ಫಲುಗುಣನೆನಲೆಂದ || 1 ||
ಕಲಿತುದನೆಲ್ಲವ ಫಲವಿಲ್ಲದೆ ನೀ |
ಕಳೆದುಕೊಳುವುದ್ಯಾಕೆ ||
ಹೊಳೆಹಳ್ಳಗಳನು ಕಳಿದಮೇಲುದಧಿಯ |
ನೆಲೆಯನು ಶೋಧಿಪದು || 2 ||

ಕೆಲಸಕೆ ತಕ್ಕುದೆ ಫಲಪ್ರಾಪ್ತಿಯು ನಿಜ |
ಕುಲಕೆ ತಕ್ಕುದು ಬುದ್ಧಿ ||
ತಿಳಿದುಕೊಳ್ಳೆಂದು ಜ್ವಲಿಸುವ ಪರಿಘವ |
ಸೆಳೆದಿಟ್ಟಡೆ ನೋಡಿ || 3 ||
ಸುಲಭ ವಿಧಾನದ ನೆಲೆಯಲಿ ನಾ ಪ್ರತಿ |
ಫಲವಿತ್ತಪೆನೆಂದು ||
ಬಲು ಮುದ್ಗರದಿಂ ಗೆಲಿದಿಟ್ಟನು ಹೊಂ |
ದಳಿಗೆಯ ತೋಮರವ || 4 ||
ಸುರಗಿಯೊಳದ ಸಂಹರಿಸುತಿರಲು ಛೀ |
ಕರ ಶಶಿಹಾಸವನು ||
ತಿರುಹಿಡೆ ವಜ್ರದಿ ಮುರಿದಿಡಲರ್ಕಜ |
ಮರಳಿ ಧನಂಜಯನು || 5 ||
ಬತ್ತಳಿಕೆಗೆ ಕೈ ಯೆತ್ತಿ ಸೆಳದ ಫಣಿ |
ಸೂತ್ರವ ಕಡು ಮುನಿದು ||
ಕತ್ತರಿಸೊಮ್ಮೆಗೆನುತ್ತರ್ಜುನನೌ |
ಡೊತ್ತುತ ಭುಜವಲುಗಿ || 6 || 389 ||

**ಭಾಮಿನಿ**
ಇದು ಮಹಾ ಮೃತ್ಯುವಿನ ಬಾಯಿಂ |
ದೊದಗಿ ಬೀಸುವ ನಾಲಿಗೆಯೊ ಮೇ |
ಣಿದು ಗಜಾಸುರನುಗ್ರಶುಂಡಾದಂಡವೋ ಮೇಣು ||
ಉದಧಿಮಥನದ ವಾಸುಕಿಯೊ ಕ |
ಲ್ಪದ ಮಹಾಭೈರವನ ಖಡ್ಗವೊ |
ಹದನರಿಯದೆನೆ ಸೆಳೆದು ತಿರುಹಿಟ್ಟನು ಧನಂಜಯನು || 1 || 390 ||

**ಸೌರಾಷ್ಟ್ರ - ತ್ರಿವುಡೆ**
ಕೂಡೆ ದಶದೆಸೆಗಳಲಿ ಕಾರ್ಬೊಗೆ |
ಮೂಡಿ ಮುಸುಕಲು ಭುವನ ಕಂಪಿಸೆ |
ಯಾಡಲೇನಾಕಾಶ ಮಾರ್ಗದಿ | ಸೂಡಿ ಬಂದು || 1 ||
ಸುತ್ತಿ ಕರ್ಣನ ಕೆಡಹೆ ಭುಜಬಲ |
ಸತ್ವಗುಂದಿರೆ ನೋಡಿ ಫಲುಗುಣ |
ಧೂರ್ತ ನಿನಗಾ ಜೀವ ಮಾತ್ರವ | ನಿತ್ತೆ ಸಾಕು || 2 ||
ಪ್ರಾಣ ಉಂಟೆಲೊ ನಿನಗೆ ಜೀವವ |
ದಾನವಿತ್ತೆನು ಸ್ಮರಿಸುತೆನ್ನನು |
ಕ್ಷೋಣಿಯೊಳಗಿರು ಯೆಂದೆನುತ ಬಹು | ಮಾನದಿಂದ || 3 ||
ಪಾಶಬಂಧವ ಬಿಡಿಸಿ ಕರದಿಂ |
ಪೂಸಿ ಮಯ್ಯನು ಮರಳಿಸುತ ಪರಿ |
ತೋಷದಿಂ ತಿರುಗಿದನು ಜಯರವ | ತೋಷದಿಂದ || 4 || 394 ||

**ಸಾಂಗತ್ಯ - ರೂಪಕ**
ಇರಲಿತ್ತ ಗುರು ಕೃಪ ಸುರನದೀಜಾದ್ಯರು |
ಹರಿಯೊಳಪ್ಪಣೆಗೊಂಡು ಮರಳೆ ||
ಕುರುರಾಯ ದುಗುಡದಿ ತರಣಿಜನೊಡಗೂಡಿ |
ತಿರುಗಿದನಿಭಪುರಕಂದು || 1 ||
ಚಂದ್ರಸೇನನು ಬಳಿಕಂದು ಸರ್ವರ ಕರ |
ತಂದರಮನೆಗೆ ಪ್ರೀತಿಯಲಿ ||
ಸಂದ ಭೋಜನ ಪಾನದಿಂದ ಮನ್ನಿಸಿದ ಗೋ |
ವಿಂದನು ಸಹಿತ ಸಂಭ್ರಮದಿ || 2 ||
ಮರುದಿನ ಮುದದಿ ಶ್ರೀ ಹರಿಯನುಮತದಿಂದ |
ನರನಿಗೆ ಕುಮುದಲೋಚನೆಯ ||
ಪರಿಣಯ ಗಯ್ಯಲು ಮರುತಸಂಭವನೊಳಂ |
ದರುಹಿ ನಿಶ್ಚಯಗೈದರೊಡನೆ || 3 ||
ದಶದ ಮಾಸದ ಶುದ್ಧ ದಶಮಿ ಚಂದಿರವಾರ |
ಝಷಲಗ್ನದಲಿ ಫಲುಗುಣಗೆ ||
ಕುಶಲದಿ ಮದುವೆಯನೆಸಗೆ ನಿಶ್ಚಯಿಸಿ ಸಂ |
ತಸದಿ ಸನ್ನಹಗಯ್ವರಂದು || 4 || 398 ||

**ಕಾಂಬೋಧಿ - ಝಂಪೆ**
ಧರಣಿಪತಿ ಧರ್ಮಜಾದ್ಯರ ಬಂಧು ಬಾಂಧವರ |
ಕರಸಿ ದಿಬ್ಬಣವೆರಸಿ ಬಂದು ||
ಗುರುವರನ ಮತದಿಂದ ಮೆರವ ಮಂಟಪದೊಳಗೆ |
ತೆರೆಮರೆಯೊಳೊಲೆದು ಶೃಂಗರಿಸಿ || 1 ||
ಭೂಸುರರ ಬಲುವೇದಘೋಷದಲಿ ಶೋಭಾನ |
ದಾಸುದತಿಯರ ರಮ್ಯರವದಿ ||
ವಾಸವಾದ್ಯರು ಪೊಗಳಿ ಸೂಸೆ ಸುಮವೃಷ್ಟಿ ನಾ |
ನಾ ಸುವಾದ್ಯ ಧ್ವನಿಯು ಮೊಳಗೆ || 2 ||
ಭಾನುಮಂಡಲಕೆ ಸರಿಗಾಣಿಸುವ ತತ್ಸಭೆಯೊ |
ಳಾನಿತಂಬಿನಿ ಕುಮುದನಯನೆ ||
ಮಾಣಿಕ್ಯ ಮಾಲಿಕೆಯನಾ ನರನ ಕೊರಳಿಗಿಡೆ |
ಮಾನಿನಿಯರಾರತಿಯ ಬೆಳಗೆ || 3 || 401 ||

**ಢವಳಾರ - ಶೋಭಾನೆ**
ರತಿಪತಿಬಿಂಬೆಯರತಿ ಸೊಬಗಿನೊಳು |
ಜತೆಗೂಡುತ ಗೆಜ್ಜೆ ಝಣಝಣೆರೆನಲು ||
ಸತತ ಮಂಗಳ ಶೋಭಾನವ ಪಾಡುತ |
ಮತಿಯುತೆಯರು ನಡು ಬಳಕುತ ನಾಚುತ |
ಲತಿಶಯದಾರತೀಯ ಬೆಳಗಿದರ್ || ಶೋಭಾನೆ || 1 ||
ಉಟ್ಟ ಪಟ್ಟಾವಳಿ ನೆರಿ ನೆಲ ಕವಿಯೇ |
ತೊಟ್ಟ ರತ್ನಾಭರಣಂಗಳು ಹೊಳೆಯೆ ||
ಸೃಷ್ಟಿಗೆ ಮಾರನ ದಂಡೈದಿತೊ ಯೆನೆ |
ಬಟ್ಟ ಕುಚದ ಸ್ಮರಚೇಷ್ಟಿತೆಯರು ಬಲು |
ಶ್ರೇಷ್ಠದಾರತಿಯಾ ಬೆಳಗಿದರ್ || ಶೋಭಾನೆ || 2 ||
ಮೂರು ಲೋಕದ ಗಂಡ ವೀರನರ್ಜುನಗೆ |
ನಾರಿಶಿರೋಮಣಿ ಕುಮುದನಯನೆಗೆ ||
ಮಾರಹರನೊಳೆಚ್ಚಾಡಿ ಮೆಚ್ಚಿಸಿದಗೆ |
ನೀರಜಾಕ್ಷಿಗೆ ಮುರವೈರಿಸಖಿಗೆ ಚಲ್ವ |
ನಾರಿಯರಾರತಿಯಾ ಬೆಳಗಿದರ್ || ಶೋಭಾನೆ || 3 || 404 ||

**ವಾರ್ಧಕ**
ಇಂತಖಿಳ ವೈಭವದಿ ವೈವಾಹ ಕಳಿಯೆ ತದ |
ನಂತರದಿ ಚಂದ್ರಸೇನನ ಕರದು ನರನೆಂದ |
ಕಾಂತಾರವಾಸಮಂ ಪೂರೈಸಿ ತವ ಸುತೆಯ ಕರಕೊಂಡು ಪೋಪೆನೆನುತ ||
ಸಂತೈಸಿ ಮುರವೈರಿ ಸಹಿತ ನೇಮವಗೊಂಡು |
ಕೌಂತೇಯರಾ ಕಾಮ್ಯಕಾರಣ್ಯಕೈತರಲು |
ಕಂತುಪಿತನಳಿಯ ಸಹ ದ್ವಾರಕಿಗೆ ತೆರಳಿದಂ ಭೂಮೀಶ ಕೇಳೆಂದನು || 1 || 405 ||

**ಕೇದಾರಗೌಳ - ಅಷ್ಟ**
ಇನಿತು ಸಚ್ಚಾರಿತ್ರವನು ವಾಣಿ ನುಡಿಸಿದಂ |
ತನುಗೊಂಡು ವಿರಚಿಸಿದೆ ||
ಘನ ಬಲ್ಲ ಮಹಿಮರು ಗುಣದಿಂದಲಿರಲು ಕುಂ |
ದನು ತಿದ್ದಿ ಮೆರಸುವದು || 1 ||
ಚವರೀವನಾಲಯಾಖ್ಯವನೀ ನಾರಾಯಣ |
ಭುವಿವೇದ ಜ್ಯೋತಿಷ್ಕನ ||
ಕುವರನಾಗಿಹನು ಬಿಂದುಸುಯೋಗತ್ರಿಂಶತಿ |
ಗವತರಿಸಿದ ವರ್ಣಕೆ || 2 ||
ಶೃಂಗಸಂಯುತ ಮಾತೃಕಾಂಗದಿ ತೋರ್ಪ ವ |
ರ್ಣಂಗಳ ತಿಳಿದಳದು ||
ಸಂಗಡೇಕಾದಶ ಭಂಗಿಸೆ ಶಿರದಿಂದ |
ಮುಂಗಾಡೆ ವರ್ಣಗೊಂಡು || 3 ||
ಸಾರಿ ಜೋಡಿಸಲಪ್ಪ ಚಾರು ಪೆಸರ ನೋಡ |
ಲಾರಸಾಲದ ವನಕೆ ||
ಮೀರಿ ಪರ್ಣವ ಮೆದ್ದು ದೂರಾಲನಡು ಕೃತ |
ಕಾರಿಗೆ ಕೊರತೆಯುಂಟೆ || 4 || 409 ||

**ತ್ವರಿತ – ಝಂಪೆ (ಮಂಗಳಾಚರಣ)**

ನಿರುಪಮ ಚಿದಾನಂದ ನಿಗಮಾಗಮ ಸ್ತೋತ್ರ |
ಉರಗತತಿಭೂಷಣ ತ್ರಿಣೇತ್ರ ಪಂಚಾಸ್ಯ ||
ಸುರನರ ಭುಜಂಗಾದಿ ತ್ರಿಭುವನಾನತ ಪಾದ |
ದುರಿತಕುಲವಿಧ್ವಂಸ ಗುರು ಪರಮಹಂಸ ||
ಜಯ ಮಂಗಳಂ ನಿತ್ಯ ಶುಭ ಮಂಗಳಂ || 1 ||
ನಾದಸಗುಣ ಬ್ರಹ್ಮ ಪೂರ್ಣೇಂದು ಮೌಳಿ ಖಳ |
ಸೂದನ ಜಟಾಮಕುಟ ಗಜ ಕೃತ್ತಿವಾಸ ||
ಆದಿಮಧ್ಯಾಂತ್ಯವರ್ಜಿತ ಚತುರ್ಭುಜ ಸಾಮ |
ವೇದಗಾನಪ್ರಿಯ ಸದಾಶಿವ ನಮಾಮಿ || ಜಯ ಮಂಗಳಂ || 2 ||
ವರಮೃಗ ಪಿನಾಕ ಡಮರುಗಹಸ್ತ ದೇವನಿಗೆ |
ಮುರವೈರಿ ಸುಪ್ರಿಯಗೆ ಮುನಿನಮಿತಗೆ ||
ತರುಣಾರ್ಕಭಾಸನಿಗೆ ನಿರತ ನಮ್ಮನು ಪೊರವ |
ಗಿರಿಜಾತೆಯರಸ ನಿತ್ಯಾತ್ಮ ಶಂಕರಗೆ ||
ಜಯ ಮಂಗಳಂ ನಿತ್ಯ ಶುಭ ಮಂಗಳಂ || 3 || 412 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ

**ಪ್ರಸಂಗ ಪ್ರತಿ ಆಧಾರ:** ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ ಇವರು ೧೯೩೩ರಲ್ಲಿ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಉಮೇಶ್ ಶಿರೂರು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ಬರವಣಿಗೆ:** ರಂಜನಾ ಭಟ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ್ ಸಾಮಗ, ನಟರಾಜ ಉಪಾಧ್ಯ